53

# ಯಾವುದೇ ಬದಲಿಯನ್ನು ಅಂಗೀಕರಿಸದಿರು

**ಓದುವ ಮನೆಪಾಠ #21**

VI. ಮೂರನೇ ಪಸ್ಕದಿಂದ, ಆತನು ಬೆಥನಿಗೆ ಹಿಂದಿರುಗಿದ ಸಮಯದವರೆಗೆ (ಮುಂದುವರೆಯುವದು).

M. ಯೆರೂಸಲೇಮಿನ ಪರ್ಣಶಾಲೆಗಳ ಹಬ್ಬದಂದು (ಮುಂದುವರೆಯುವದು).

3. ಹಬ್ಬದ ನಂತರ: ಇತರೆ ಬೋಧನೆಗಳು (ಮುಂದುವರೆಯುವದು).

b. ಬೆಳಕು ಹಾಗೂ ಕತ್ತಲೆಯ ಕುರಿತ ಬೋಧನೆ (ಯೋಹಾನ 8:12-59).

c. ದೈಹೀಕ ಹಾಗೂ ಆತ್ಮೀಕ ಕುರುಡ ತನ ಕುರಿತ ಬೋಧನೆ (ಯೋಹಾನ 9:1-41).

d. ಒಳ್ಳೆ ಕುರುಬ ಹಾಗೂ ಸೇವಕರ ಕುರಿತ ಬೋಧನೆ (ಯೋಹಾನ 10:1-21).

**ಪೀಠಿಕೆ**

ಹಿಂದಿನ ಪಾಠದಲ್ಲಿ, ಯೇಸು ಮತ್ತು ಆತನ ಶಿಷ್ಯರು ಗುಡಾರದ ಹಬ್ಬಕ್ಕಾಗಿ ಯೆರೂಸಲೇಮನ್ನು ತಲುಪಿದರು. ಹಬ್ಬದ ತರುವಾಯ, ಕ್ರಿಸ್ತನು ಬೋಧನೆಗಾಗಿ ಇನ್ನೂ ಕೆಲವು ದಿನ ಅಲ್ಲಿಯೇ ಉಳಿದುಕೊಂಡನು. ದುರಾಚಾರಿಯಾದ ಹೆಂಗಸನ್ನು ತೆಗೆದುಕೊಂಡು ಬಂದ ಚಿರಪರಿಚಿತವಾದ ಘಟನೆಯೊಂದಿಗೆ ಈ ಪಾಠವು ಮುಕ್ತಾಯವಾಯಿತು. ಹಿಂದಿನ ಅಧ್ಯಯನವು ಎಲ್ಲಿ ಮುಕ್ತಾಯವಾಯಿತೋ ಅಲ್ಲಿಂದ ಈ ಅಧ್ಯಯನವು ಪ್ರಾರಂಭವಾಗುವುದಾಗಿದೆ.

ಈ ಪಾಠದಲ್ಲಿನ ಘಟನೆಗಳು ಯೋಹಾನನಿಂದ ಮಾತ್ರ ದಾಖಲಿಸಲ್ಪಟ್ಟಿವೆ. ಎಲ್ಲಾ ಕಾರ್ಯಗಳೂ ಸಹ ಹತ್ತಿರದಲ್ಲಿಯೇ ಅಥವಾ ಯೆರೂಸಲೇಮಿನಲ್ಲಿಯೇ ನಡೆಯಲ್ಪಟ್ಟವು (ಯೋಹಾನ 8:20, 59; 9:7) ಮತ್ತು ಗುಡಾರಗಳ ಹಬ್ಬದ ನಂತರ ಸಂಭವಿಸಿರಬಹುದು.[1]

ಈ ವೇದ ಭಾಗವು ಯೇಸು ಮತ್ತು ಯೆರೂಸಲೇಮಿನಲ್ಲಿಯ ಧರ್ಮದ ತಾರತಮ್ಯದ ಮಧ್ಯ ತೀವ್ರಗೊಂಡ ಸಂಘರ್ಷದ ವಿಷಯಗಳ ಕೇಂದ್ರವಾಗಿದೆ. ಆತನು ನಾಯಕರುಗಳಿಗೆ "ನಿಮ್ಮ ವಿಷಯವಾಗಿ ಮಾತನಾಡುವುದಕ್ಕೂ ನಿಮ್ಮ ಮೇಲೆ ತೀರ್ಪುಮಾಡುವುದಕ್ಕೂ ಅನೇಕ *ಸಂಗತಿಗಳು ನನಗುಂಟು*" (ಯೊಹಾನ 8:26; ಒತ್ತಿ ಹೇಳಿದ್ದು ನನ್ನದು) ಎಂದು ಹೇಳಿದನು. ಈ ವಿಷಯದಿಂದ ಮತ್ತು ತನ್ನನ್ನು ಪ್ರಕಟಿಸಿಕೊಳ್ಳುವುದಕ್ಕಾಗಿ. ಆತನು ತನ್ನ ಮುಂದೆ ಪ್ರತ್ಯಕ್ಷನಾಗುವವನಾದನು. ವೇದಭಾಗದಲ್ಲಿ, ಆತನು ತನ್ನ ಮತ್ತು ಅವರ ಮಧ್ಯ ಸೂಚಿಸಲಾದ ಅಥವಾ ಹೇಳಲಾದ ಅನೇಕ ವ್ಯತ್ಯಾಸಗಳನ್ನು ಎಳೆದನು:

| ಕ್ರಿಸ್ತನು | ಆತನ ವೈರಿಗಳು |
|---|---|
| ಲೋಕದಲ್ಲಿ (8:12) | ಕತ್ತಲೆಯಲ್ಲಿ (8:12) |

| | |
|---|---|
| ನಿಜವಾದ ನ್ಯಾಯತೀರ್ಪು (8:16) | ಶಾರೀರಕ ನ್ಯಾಯತೀರ್ಪು (8:15) |
| ಮೇಲಿನಿಂದ (8:23) | ಕೆಳಗಿನಿಂದ (8:23) |
| ಜಗತ್ತಿನಿಂದಲ್ಲ (8:23) | ಜಗತ್ತಿನಿಂದ (8:23) |
| ತಂದೆ: ತಂದೆ ದೇವರು (8:38) | ತಂದೆ: ಸೈತಾನ (8:44) |
| ದೇವರನ್ನು ತಿಳಿಯುವದು (8:55) | ದೇವರನ್ನು ತಿಳಿಯದಿರುವದು (8:55) |
| ಸತ್ಯತನ (8:14, 40, 45, 46) | ಸುಳ್ಳುಗಾರ (8:44, 55) |
| ಒಳ್ಳೆಯ ಕುರುಬ (10:11, 14) | ಕಳ್ಳ (10:12, 13) |

ಕ್ರಿಸ್ತನು ತನಗೋಸ್ಕರದ ತನ್ನ ಪ್ರತಿಪಾದನೆಯಲ್ಲಿ ದಿಟ್ಟನಾಗತೊಡಗಿದನು. ಏಳರಲ್ಲಿ ಮೂರು ಹೇಳಿಕೆಗಳಲ್ಲಿ "ನಾನು ಇದ್ದೇನೆ" ಎಂಬ ಹೇಳಿಕೆಯು ಈ ಅಧ್ಯಯನಕ್ಕಾಗಿನ ಓದುವ ಪರಿಚ್ಛೇದದಲ್ಲಿ ಯೋಹಾನನಿಂದ ದಾಖಲಿಸಲ್ಪಟ್ಟಿದೆ.[2] "*ನಾನೇ* ಲೋಕಕ್ಕೆ ಬೆಳಕು" (ಯೋಹಾನ 8:12; 9:5; ಒತ್ತಿ ಹೇಳಿದ್ದು ನನ್ನದು) ಮತ್ತು "*ನಾನೇ* ಒಳ್ಳೆಯ ಕುರುಬನು" (10:11, 14; ನನ್ನ ವಿವರಣೆ) ಎಂದು ಯೇಸು ಹೇಳಿದನು.[3] ಆತನ ಪ್ರಮುಖವಾದ ದಿಟ್ಟತನದ ಹೇಳಿಕೆಯು ಹೇಗೋ, ಆತನು ಹೇಳಿದಂತಹ "ನಿಮಗೆ ನಿಜನಿಜವಾಗಿ ಹೇಳುತ್ತೇನೆ ಅಬ್ರಹಾಮನು ಹುಟ್ಟುವುದಕ್ಕಿಂತಲೂ ಮುಂಚಿನಿಂದಲೂ *ನಾನು* ಇದ್ದೇನೆ" ಎಂಬುದಾಗಿದೆ (8:58; ಒತ್ತಿ ಹೇಳಿದ್ದು ನನ್ನದು). ಆತನು ಅಬ್ರಹಾಮನಿಗಿಂತಲೂ ಮುಂಚೆಯೇ ಇದ್ದನೆಂಬ ಆತನ ವಾದವಾಗಿತ್ತು. ಆದರೆ ಅದಕ್ಕಿಂತಲೂ ಹೇಚ್ಚಾಗಿ: ಇದು ಆತನ ದೃಢೀಕರಣವು ಆಗಿತ್ತು.

ಯೇಸು ಮತ್ತು ತಪ್ಪುಹೊರಿಸುತ್ತಿದ್ದ ಧಾರ್ಮಿಕ ಮಧ್ಯದ ವ್ಯತ್ಯಾಸದ ಆ ದಿನವು ಈ ಪಾಠದ ಶೀರ್ಷಿಕೆಯಾಗಿ ಸೂಚಿಸಲ್ಪಟ್ಟಿದೆ. ವಸ್ತುಗಳು ಒಳ್ಳೆಯ ರೀತಿಯಲ್ಲಿ ಮಾರಟವಾಗುವಾಗ, ಮಾರುಕಟ್ಟೆಯು ಸಾಮಾನ್ಯವಾಗಿ ಅನುಕರುಣೆಗಳೊಂದಿಗೆ ಉಕ್ಕಿಹರಿಯುತ್ತದೆ, ಹಲವು ಬಾರಿ ಕಳದರ್ಜೆಯ ಅನುಕರಣೆಗಳು ಆಗಿರುತ್ತದೆ. ಇದು ಸಂಭವಿಸಿದಾಗ, ಮೂಲ ಉತ್ಪಾದನೆಯ ತಯಾರಕರು "ಇದರ ಹೊರತು ಯಾವುದೇ ಬದಲಿಯದು ಇಲ್ಲ" ಈ ತರದ ಜಾಹಿರಾತಿನ ಪದಗಳನ್ನು ಜೋಡಿಸಿರುತ್ತಾರೆ. ಇಂದು, ಅನೇಕರು ಜಗತ್ತಿನ ಒಂದೇ ಆಶಾಕಿರಣವಾಗಿ ರುವ ಕ್ರಿಸ್ತನನ್ನು ತಿರಸ್ಕರಿಸುವವರು ಮತ್ತು ವಿವಿಧ ಬದಲಿಯವುಗಳನ್ನು ಸೂಚಿಸುವವರೂ ಆಗಿರುತ್ತಾರೆ. ನಮ್ಮ ಅಧ್ಯಯನದ ಬಲವು "ಕರ್ತನನ್ನು ಬಿಟ್ಟು ಯಾವ ಬದಲಿಯು ಇಲ್ಲ" ಎಂಬುದಾಗಿದೆ.

## ಇತರ ಬೆಳಕನ್ನು ಸ್ವೀಕರಿಸದಿರು (ಯೋಹಾನ 8:12-59)

ಈ ಪಾಠದ ಆರಂಭದಲ್ಲಿ, ಯೇಸು ದೇವಾಲಯದ "ಕಾಣಿಕೆ ಪೆಟ್ಟಿಗೆಗಳು ಇರುವ ಅಂಗಳದಲ್ಲಿ" (ವಚನ 20) ಬೋಧಿಸುತ್ತಿದ್ದನು (ವಚನಗಳು 20, 59). ಕಾಣಿಕೆ ಪೆಟ್ಟಿಗೆಗಳು

ಇರುವ ಅಂಗಳವು ಸ್ತ್ರೀಯರ ಮಂಟಪದಲ್ಲಿ ಇದ್ದು ಹದಿಮೂರು ತುತ್ತೂರಿಯ ಆಕಾರದ ಕಾಣಿಕೆಯ ಪೆಟ್ಟಿಗೆಗಳು ಅಲ್ಲಿದ್ದವು (ನೋಡಿರಿ 12:41, 43; ಲೂಕ 21:1[5]). ಸಭಾಮಂದಿರಕ್ಕಾಗಿ ಕೂಡಿಬರುತ್ತಿದ್ದ ಸಭಾಂಗಣದಿಂದ ಇದು ಅಷ್ಟೊಂದು ದೂರವಾಗಿರಲಿಲ್ಲ.

ಹಿಂದಿನ ಪಾಠದಲ್ಲಿ ಗುಡಾರದ ಹಬ್ಬದ ಸಂಧರ್ಭದಲ್ಲಿ ನೀರಿನ ಶುದ್ಧಾಚರಣೆಗೆ ಸಂಬಂದಿಸಿದಂತೆ ಯೇಸು "ಜೀವಕರವಾದ ನೀರು" ಎಂದು ರೂಪಕವಾಗಿ ಹೇಳಿದನು. ಈಗ ಆತನು ಹಬ್ಬದ ಆರಂಭದಲ್ಲಿ ಸ್ತ್ರೀಯರ ಮಂಟಪದಲ್ಲಿ ನೇತುಹಾಕಲಾದ ದೊಡ್ಡ ದೀಪದ ದೀವಿಗೆಯನ್ನು ಸೂಚ್ಯಾರ್ಥವಾಗಿ ಸೂಚಿಸುತ್ತಾ ತಾನು "ಜಗತ್ತಿಗೆ ಬೆಳಕಾಗಿದ್ದಾನೆ" ಎಂದು ಘೋಷಿಸಿದನು.[6] ನಂತರ ತಿರುಗಿ ಅವರ ಸಂಗಡ ಮಾತಾಡಲಾರಂಭಿಸಿ ನಾನೇ ಲೋಕಕ್ಕೆ ಬೆಳಕು: "ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡವ ಬೆಳಕನ್ನು ಹೊಂದಿದವನಾಗಿರುವನು" ಎಂದು ಹೇಳಿದನು (ವಚನ 12). H. I. Hester ರವರು, "ಎಂಥ ಪ್ರತಿಪಾದನೆ-ಇದು ಸತ್ಯವಾಗಿರಬಹುದು ಅಥವಾ ಎಂದಿಗೂ ಮಾನವನಿಂದಾಗದ ಬಲು ಎದೆಗಾರಿಕೆಯುಳ್ಳದ್ದಾಗಿರಬೇಕು" ಎಂದು ವ್ಯಾಖ್ಯಾನಿಸಿದ್ದಾರೆ.[7] ಕ್ರಿಸ್ತನ ದಿಟ್ಟ ನುಡಿಗಳು ಯೆಹೂದಿ ಅಧಾಕಾರಿಗಳಿಗೆ ಬಿಸಿಯನ್ನು ವರ್ಗಾಯಿಸಿ ಅವರನ್ನು ಪ್ರಚೋದಿಸಿದ್ದು ಇದು ಅಧ್ಯಾಯದ ಕೊನೆಯವರೆಗೂ ಸಾಗುವುದಾಗಿದೆ. ಅಧ್ಯಾಯ7ರಲ್ಲಿನ ವಿವಾಗವು ಮತ್ತು ಅಧ್ಯಾಯ 5ರಲ್ಲಿನ ಅದೇ ತರದ ವಿಷಯದ ಸಂಘರ್ಷದ ಚರ್ಚೆಯನ್ನು ವಿವರಿಸುವುದಾಗಿದೆ.[8] ಅನೇಕ ದೊಡ್ಡ ವಿಷಯಗಳು ಈ ಅಧ್ಯಾಯದಲ್ಲಿ ಪರಿಚಯಿಸಲ್ಪಟ್ಟಿವೆ, ಆದರೆ ಆಚರ್ಚೆಯ ಓರೆ ಕೋರೆಗಳನ್ನು ಮತ್ತು ತಿರುವುಗಳನ್ನು ವಿವರಿಸಲು ಸ್ಥಳವು ನಮಗೆ ಅವಕಾಶಕೊಡದು. ನಾವು ಪ್ರಮುಖವುಗಳಲ್ಲಿಯೇ ಸಮಾಧಾನ ಹೊಂದುವಾ.

**ಸತ್ಯದ ಬೆಳಕು**

ಯೆಹೂದಿ ನಾಯಕರುಗಳು "ನೀನು ಯಾರು?"; "... ನಿನ್ನನ್ನು ಯಾರಂತ ಮಾಡಿಕೊಳ್ಳುತ್ತಿ?" ಎಂದು ಕೇಳಬಹುದು (8:25ಎ, 53ಬಿ). ಕ್ರಿಸ್ತನು ತಾನು ನಿರ್ಧಿಷ್ಟವಾಗಿ "ಯಾರು ಮತ್ತು ತನ್ನ ಕಾರ್ಯವೇನು?"[9] ಎಂದು ಹೇಳಲು ಹಿಂಜರಿಯಲಿಲ್ಲ. ಯೇಸು ಲೋಕಕ್ಕೆ ಬೆಳಕಾಗಿದ್ದಾನೆಂಬ ಹೇಳಿಕೆಯನ್ನು ನಾವು ಈಗಾಗಲೇ ಗಮನಿಸಿದ್ದೇವೆ (ವಚನ 12). ಇದಕ್ಕೆ ಜೊತೆಯಾಗಿ ...

- ... ಆತನ ಮಾತಗಳು ಸತ್ಯವಾಗಿವೆ (ವಚನಗಳು 14, 16).
- ... ಅದು ಆತನು ಮೇಲಿನಿಂದ ಬಂದವನು (ವಚನ 23).
- ... ಅದು ಆತನು ದೇವರಿಂದ ಕಳುಹಿಸಲ್ಪಟ್ಟನು[10] ಆಗಿದ್ದಾನೆ (ವಚನ 26).
- ... ಅದು ಆತನು ದೇವರು ಕಲಿಸಿಕೊಟ್ಟಿದ್ದನ್ನು ಮಾತ್ರ ಮಾತನಾಡುವವನಾಗಿದ್ದಾನೆ (ವಚನಗಳು 26, 28).
- ... ದೇವರು ಸಂತೋಷಗೊಳ್ಳುವುದನ್ನು ಮಾತ್ರ ಆತನು ಮಾಡುವವನಾಗಿದ್ದಾನೆ (ವಚನ 29).

ಈ ಪ್ರತಿಪಾದನೆಯ ವಿಷಯವಾಗಿ ನೋಡವುದಾದರೆ, ದೇವರು ಸಂತೋಷಿಸುವುದನ್ನು ಮಾತ್ರ ಆತನು ಮಾಡುವವನಾಗಿದ್ದಾನೆ, 46ರಲ್ಲಿ "ನನ್ನೊಳಗೆ ಪಾಪವನ್ನು ತೋರಿಸಿಕೊಡುವವರು ನಿಮ್ಮಲ್ಲಿ ಯಾರಿದ್ದಾರೆ?"ಎಂಬಲ್ಲಿನ ಆತನ ಸವಾಲನ್ನು ನಾನು ಗಮನಿಸುವವನಾಗಿದ್ದೇನೆ. NIVಯಲ್ಲಿ "ನನ್ನಲ್ಲಿ ಯಾವನಾದರೂ ಪಾಪವನ್ನು ಮನವರಿಕೆ ಮಾಡಿಕೊಡುವನೋ?" ಎಂದಿದೆ. ನೀನು ಮತ್ತು ನಾನು ಈ ಪ್ರಶ್ನೆಯನ್ನು ಕೇಳಿದ್ದಾರೆ, ನಮ್ಮನ್ನು ತಿಳಿದವರು ಬಂದು ಮೂರು ಅಡಿ ಉದ್ದದ ನಾವು ಮಾಡಿದ ನಮ್ಮ ಪಾಪಗಳ ಪಟ್ಟೀಯನ್ನು

ನಮ್ಮ ಮುಂದೆ ಇಡಲು ಅವರಿಗೆ ಕೆಲವೇ ಕ್ಷಣಗಳು ಸಾಕು. ಯಾರೊಬ್ಬನೂ ಯೇಸುವಿನ ಮೇಲೆಪ್ಪನ್ನು ಹೊರಿಸಲಾರನು,[11] ಹೇಗೋ ಆತನು "ಪಾಪವಿಲ್ಲದವನಾಗಿದ್ದನು" (ಇಬ್ರೀಯ 4:15).

ಯೋಹಾನ 8:25ರಲ್ಲಿನ "ನೀನು ಯಾರು?" ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸುತ್ತಾ, ಯೇಸು,

- "ನೀನು ಯಾರನ್ನು ಕೊಲ್ಲಬೇಕೆಂದು ನೋಡುತ್ತಿರುವೆಯೋ ಅವನೇ ನಾನಾಗಿದ್ದೇನೆ" (ವಚನಗಳು 37, 40)
- "ನೀನು ಯಾರನ್ನು ಎತ್ತರದಲ್ಲಿರಿಸಬೇಕೆಂದು ಕೊಂಡಿದ್ದೀಯೋ ಅವನು ನಾನೇ" (ಕ್ರೂಜೆಯ ಮೇಲೆ ತನ್ನ ಮರಣವನ್ನು ಸೂಚಿಸುತ್ತಾ) (ವಚನ 28; ನೊಡಿರಿ 3:14; 12:32).
- "ಪರಲೋಕಕಕ್ಕೆ ಏರಿಹೋಗುವವನು ನಾನೇ" (ತನ್ನ ದಿವಾರೋಹಣವನ್ನು ಸೂಚಿಸುತ್ತಾ; 8:21).
- "ನೀನು ರಕ್ಷಿಸಲ್ಪಡಬೇಕೆಂದಿದ್ದರೆ ನೀನು ನಂಬಿಕೆಯಿಡಬೇಕಾದ ಒಬ್ಬನೆಂದರೆ ಅವನು ನಾನೇ" (ವಚನಗಳು 24,[12] 30, 46).

"ಆತನು ಈ ಮಾತಗಳನ್ನು ಮಾತನಾಡುವಾಗ ಅನೇಕರು ಆತನಲ್ಲಿ ನಂಬಿಕೆಯಿಟ್ಟರು" ಎಂದು ವಚನ 30 ಹೇಳುತ್ತದೆ. ಅದ್ಭುತವಾಗಿ, ಅವರಲ್ಲಿ "ಆತನಲ್ಲಿ ನಂಬಿಕೆ" ಯಿಟ್ಟಂಥವರಲ್ಲಿ ಕೆಲವರು ಯೆಹೂದಿ ವರ್ಗಕ್ಕೆ ಸೇರಲ್ಪಟ್ಟವರಾಗಿದ್ದರು (ವಚನ 31;[13] ಯೋಹಾನ 9:16ರನ್ನು ಮುಂದೆ ನೋಡಿರಿ).[14] ಇವರಲ್ಲಿ ಒಬ್ಬನು ನಿಕೋದೇಮನು (ಯೋಹಾನ 7:50); ಇನ್ನೊಬ್ಬನು ಅರಿಮಥಾಯದ ಯೋಸೆಫನು ಆಗಿದ್ದನು (ಮಾರ್ಕ 15:43; ಲೂರ್ಕ 23:50, 51; ಯೋಹಾನ 19:38); ಬಹುಶಃ ಅದರಲ್ಲಿ ಇನ್ನೂ ಕೆಲವರು ಇದ್ದರು (ನೋಡಿರಿ ಯೋಹಾನ 12:42).

ತನ್ನಲ್ಲಿ ನಂಬಿಕೆಯಿಡುವುದು ಗೌಪ್ಯವಾಗಿ ಉಳಿಯುವುದಿಲ್ಲ, ಆದರೆ ಪ್ರಾಯೋಜಿಸಲ್ಪಡುತ್ತದೆ ಎಂದು ಒತ್ತಿಹೇಳಿದನು. "ಆಗ ಯೇಸು ತನ್ನನ್ನು ನಂಬಿದ ಯೆಹೂದ್ಯರಿಗೆ '*ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ* ನಿಜವಾಗಿ ನನ್ನ ಶಿಷ್ಯರಾಗಿದ್ದು ...' " (8:31; ಒತ್ತಿ ಹೇಳಿದ್ದು ನನ್ನದು) ಎಂದು ಹೇಳಿದನು ತಿರುಗಿ ಆತನು "... *ಯಾವಾನಾದರೂ ನನ್ನ ವಾಕ್ಯವನ್ನು* ಕೈಕೊಂಡು ನೆಡೆದರೆ ಅವನು ಎಂದಿಗೂ ಸಾವನ್ನು ಕಾಣುವುದಿಲ್ಲ" ಎಂದು ಹೇಳಿದನು (ವಚನ 51; ಒತ್ತಿ ಹೇಳಿದ್ದು ನನ್ನದು). ಕೇವಲ ನಂಬಿದರೆ ಮಾತ್ರ ಇಲ್ಲಿ ಸಾಲದು.

**ತಪ್ಪಿನ ಕತ್ತಲೆ**

ಕೆಲ ಯೆಹೂದಿ ನಾಯಕರುಗಳು ಕ್ರಿಸ್ತನಿಂದ ಪ್ರಭಾವಿತರಾದರೆ, ಹೆಚ್ಚಿನವರು ಆಗಲಿಲ್ಲ. ಪ್ರಕಾರ ಪಡಿಸುವವನು, ಬೆಳಕಿನ ಮತ್ತು ತಿಳುವಳಿಕೆಯ ಮೂಲವು ಆತನಲ್ಲ ಎಂದು ಹೆಚ್ಚಿನವರು ನಂಬಿದರು. ಮುಂದೆ, ಅವರು ಜ್ಞಾನದಲ್ಲಿಯೂ (ವಚನ 14) ಮತ್ತು ಅರಿತುಕೊಳ್ಳುವುದರಲ್ಲಿ (ವಚನ 43) ಎರಡರಲ್ಲಿಯು ಕೊರತೆಯುಳ್ಳವರಾಗಿದ್ದಾರೆಂದು ಹೇಳಿಕೆಯನ್ನು ಕೊಡವ ಮೂಲ ಯೇಸು ಅವರಿಗೆ ಕೋಪವನ್ನೆಬ್ಬಿಸಿದನು. ಅವರ ವಿಫಲತೆಗಳು ಗ್ರಹಿಸಲ್ಪಟ್ಟ ಅನೇಕ ಉದಾಹರಣೆಗಳನ್ನು ಈ ಅಧ್ಯಾಯವು ತುಂಬಿಕೊಂಡಿವೆ:

ಕ್ರಿಸ್ತನು ತನ್ನ ತಂದೆಯ ಬಗೆಗೆ ಮಾತನಾಡುವಾಗ (ವಚನ 18), ಆತನು ತನ್ನ ಪರಲೋಕದಲ್ಲಿರುವ ತನ್ನ ತಂದೆಯ ಬಗೆಗೆ ಮಾತನಾಡುತ್ತಿದ್ದಾನೆಂದು ಅವರು ಅರಿಯಲಿಲ್ಲ (ವಚನ 19; ನೋಡಿರಿ ವಚನ 27 ಸಹ).

ಯೇಸು ತಾನು ಹೊರಟುಹೊಗುವುದಾಗಿ ಹೇಳಿದಾಗ, ಮತ್ತು ತಾನು ಹೋಗುವಲ್ಲಿಗೆ ಅವರು ಬರಲಾರರು ಎಂದು ಹೇಳಿದಾಗ (ವಚನ 21), ಆತನು ಪರಲೋಕಕ್ಕೆ ಹೋಗುವುದನ್ನು ಕುರಿತು ಹೇಳುತ್ತಿದ್ದಾನೆ ಎಂದು ಅವರು ಅರಿಯಲಿಲ್ಲ. ಆತನು ಆತ್ಮಹತ್ಯೆ ಮಾಡಿಕೊಳ್ಳಬಹುದರ ಬಗೆಗೆ ಮಾತನಾಡುತ್ತಿದ್ದಾನೇನೋ ಎಂದು ಊಹಿಸಿಕೊಂಡರು (ವಚನ 22).

ಸತ್ಯವು ಅವರನ್ನು ಬಿಡುಗಡೆ ಮಾಡವದು ಎಂದು ಕರ್ತನು ಘೋಷಿಸಿದಾಗ (ವಚನಗಳು 32[15]), ಅದು ರಾಜಕೀಯ ಬಿಡುಗೆಡೆ ಎಂದು ಅವರು ಯೋಚಿಸಿದರು ಮತ್ತು "ನಾವು ಅಬ್ರಹಾಮನ ಸಂತಾನದವರು; ನಾವು ಯಾರಿಗೂ ಎಂದೂ ದಾಸರಾಗಿಲ್ಲ"[16] (ವಚನ 33ಎ) ಅಂದರು. ಆತ್ಮೀಕ ಸ್ವಾತಂತ್ರ್ಯ ವಿಷೇಶವಾಗಿ ದೋಷಗಳಿಂದ ಮತ್ತು ಪಾಪದ ಪ್ರಭಾವದಿಂದ ಬಿಡುಗಡೆಯು ಯೇಸುವಿನ ಮನದಲ್ಲಿ ಇತ್ತು (ವಚನಗಳು 34,[17] 36).

ಭೌತಿಕವಾಗಿ ಅಬ್ರಹಾಮನ ಸಂತಾನದವರಾಗಿ ಇರುವದು ಏನು ಪ್ರಯೋಜನ ಎಂದು ಅವರು ಯೋಚಿಸಿದರು (ವಚನಗಳು 33, 39, 53, 56). ಆ ಮನುಷ್ಯನ ಆತ್ಮೀಕ ಸಂತಾನದವರಾಗಿರುವದು ಬಲು ಮುಖ್ಯವಾದದ್ದು ಎಂದು ಅವರು ಅರಿತುಕೊಳ್ಳಲಿಲ್ಲ (ವಚನಗಳು 37, 39; ನೋಡಿರಿ ರೋಮಾಪುರ 2:28, 29). ದೇವರು ಅವರ ಆತ್ಮೀಕ ತಂದೆಯಾಗಿದ್ದಾನೆ ಎಂದು ಅವರು ನಂಬುವವರಾಗಿದ್ದರು (ವಚನ 41). ಯೇಸುವನ್ನು ನಿರಾಕರಿಸುವ ಮೂಲಕ, ಅವರು ತಮ್ಮ ನಿಜ ತಂದೆಯ ಚಿತ್ತಕ್ಕೆ ವಿರುದ್ಧವಾಗಿ ಸೈತಾನನೆಡೆಗೆ ಹೋಗುತ್ತಿದ್ದಾರೆ ಎಂಬುದನ್ನು ಅವರು ನೋಡುತ್ತಿಲ್ಲ (ವಚನಗಳು 37, 38, 40, 41, 44[18]).

ತನ್ನನ್ನು ನಂಬಿದವರು ಸಾವನ್ನು ಕಾಣುವುದಿಲ್ಲ (ವಚನ 51) ಎಂದು ಯೇಸು ಹೇಳಿದಾಗ, ನಾಯಕರು ಆತನು ದೈಹಿಕ ಮರಣವನ್ನು ಸೂಚಿಸುತ್ತಿದ್ದಾನೆ ಎಂದು ಯೋಚಿಸಿದರು (ವಚನಗಳು 52, 53). ಹೇಗೋ, ಯೇಸುವಿನ ಮನದಲ್ಲಿ ಆತ್ಮೀಕ ಮರಣವು ಇತ್ತು, ಆತನಲ್ಲಿ ನಂಬಿಕೆಯಿಟ್ಟವರು ಮತ್ತು ಆತನ ವಾಕ್ಯವನ್ನು ಕೈ ಕೊಂಡು ನೆಡೆಯುವವರು ಈ ಜೀವಿತದಲ್ಲಿ ದೇವರನ್ನು ಬಿಟ್ಟು ಬೇರೆಯಾಗರು (ಆತ್ಮೀಕ ಮರಣ, ಎಫೆಸ 2:1; 1 ತಿಮೊಥೆ 5:6), ಈ ಜೀವಿತದ ನಂತರ ಅವರು ನರಕಕ್ಕೆ ಹೋದರು (ಎರಡನೆಯ ಮರಣ; ಪ್ರಕಾರ 20:14; 21:8).

ಅಬ್ರಹಾಮನು ತನ್ನ ದಿನವನ್ನು ಎದುರು ನೋಡಿದನು ಮತ್ತು ಉಲ್ಲಾಸಪಟ್ಟನು ಎಂದು ಕ್ರಿಸ್ತನು ಮಾತಾಡುವಾಗ (ವಚನ 56), ಆತನು ಇಲ್ಲಸಲ್ಲದ್ದನ್ನು ಮಾತನಾಡುತ್ತಿದ್ದಾನೆ ಎಂದು ಅವರು ಯೋಚಿಸಿದರು (ವಚನ 57; ನೋಡಿರಿ ವಚನಗಳು 48,[19] 52; ಯೋಹಾನ 10:20). ಯೇಸು ತನ್ನ ಪೂರ್ವ ಅಸ್ತಿತ್ವದ ಬಗೆಗೆ ಪ್ರತಿಪಾದಿಸುತ್ತಿದ್ದಾನೆ (ವಚನ 58; ನೋಡಿರಿ ಯೋಹಾನ 1:1, 2, 14).

ಕ್ರಿಸ್ತನು ಹೆಚ್ಚಾಗಿ ಹೇಳಿದ್ದಾಗ್ಯೂ ಆತನ ವೈರಿಗಳು ಅದನ್ನು ಗ್ರಹಿಸಲಿಲ್ಲ, ಆದರೆ ಅವರು ಆ ಸಂಧರ್ಭದಲ್ಲಿ "ನಿಮಗೆ ನಿಜನಿಜವಾಗಿ ಹೇಳುತ್ತೇನೆ ಅಬ್ರಹಾಮನು ಹುಟ್ಟುವುದಕ್ಕಿಂತಲೂ ಮುಂಚಿನಿಂದಲೂ ನಾನು ಇದ್ದೇನೆ" (ಯೋಹಾನ 8:58). ಎಂಬ ಆತನ ಅಂತಿಮ ಮಾತುಗಳಲ್ಲಿನ ಮೂಲ ಪ್ರಭಾವವನ್ನು ಅರಿತುಕೊಂಡರು. ದೇವರು ಉರಿಯುವ ಮುಳ್ಳಿನ ಪೊದೆಯಲ್ಲಿ ಮೋಶೆಯೊಡನೆ ಮಾತನಾಡಿದಾಗ, ಮೋಶೆಯು ಆತನ ಹೇಸರನ್ನು ಕೇಳಿದನು. ನಾವು ಓದುವಂತೆ "ದೇವರು ಅವನಿಗೆ [ಮೋಶೆಗೆ] ಇರುವಾತನೇ ಆಗಿದ್ದೇನೆ; ನೀನು ಇಸ್ರಾಯೇಲ್ಯರಿಗೆ ಇರುವಾತನೆಂಬವನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದನು ಎಂದು ಹೇಳಬೇಕು ಅಂದನು" (ವಿಮೋಚನಕಾಂಡ 3:14). ಯೇಸು, "ಅಬ್ರಹಾಮನು ಹುಟ್ಟುವುದಕ್ಕಿಂತಲೂ ಮುಂಚಿನಿಂದಲೂ *ನಾನು* ಇದ್ದೇನೆ" ಎಂದು ಹೇಳಿದಾಗ ಆತನು ದೇವರು ತಾನೇ ಇರುವಾ ತನು ಎಂದು ಬಲು ಗೌರವಿಸಲ್ಪಟ್ಟ ಹೆಸರನ್ನು ಅನ್ವಯಿಸಿಕೊಳ್ಳುತ್ತಿದ್ದಾನೆ.

ಕ್ರಿಸ್ತ ಮಾತುಗಳ ಮಹತ್ವವನ್ನು ಆ ಕೇಳುಗರು ಅರಿತುಕೊಂಡರು, ಆದರೆ ಅದನ್ನು

ನಂಬಲು ಅವರ ಪೂರ್ವಾಗ್ರಹವು ಅವಕಾಶ ಕೊಡುವುದಿಲ್ಲ. ಅವರ ಕತ್ತಲಮಯ ಮನಕ್ಕೆ ಯೇಸು ದೇವದೂಷಣೆಯ ದೋಷದಲ್ಲಿರುವವನು ಮತ್ತು ಮರಣಕ್ಕೆ ಒಪ್ಪಿಸಲ್ಪಡುವವನು ಆಗಿದ್ದಾನೆ (ಈ ಪರಿಚ್ಛೇದವನ್ನು ಯೋಹಾನ 10:31, 33ರ ಜೊತೆ ಹೋಲಿಸಿರಿ). "ಅವರು ಆತನ ಮಾತನ್ನು ಕೇಳಿ ಆತನನ್ನು[20] ಕೊಲ್ಲುವುದಕ್ಕಾಗಿ ಕಲ್ಲನ್ನು ತೆಗೆದುಕೊಳ್ಳಲು ಯೇಸು ಅಡಗಿಕೊಂಡು ದೇವಾಲಯದೊಳಗಿಂದ ಹೊರಟು ಹೋದನು" (ಯೋಹಾನ 8:59),[21] ಬಹುಶಃ ಆತನು ಗುಂಪಿನೊಳಗೆ ಹೋದನು ಮತ್ತು ಒಮ್ಮಲೆ ಸ್ನೇಹಿತರಿಂದ ಸುತ್ತರೆ ಯಲ್ಪಟ್ಟಿರಬಹುದು. ಏನೇ ಆಗಲಿ, "ಆತನ ಕಾಲವು ಇನ್ನೂ ಬಾರದೆ ಇರುವ ಕಾರಣದಿಂದ" (ವಚನ 20) ಆತನು ದೇವರ ಸಂಕಲ್ಪದಿಂದ ರಕ್ಷಿಸಲ್ಪಟ್ಟನು.

ತೀಕ್ಷ್ಣವಾದ ವ್ಯೆತ್ಯಾಸವನ್ನು ಗುರುತಿಸುವುದಕ್ಕಾಗಿ, ನಾವು ಕೆಲಸಾರಿ "ಬೆಳಕು ಮತ್ತು ಕತ್ತಲೆಗೆ" ಇರುವ ವ್ಯೆತ್ಯಾಸದಂತೆ ಎಂದು ಹೇಳುತ್ತೇವೆ. ಯೇಸು ಮತ್ತು ಆತನ ದಿನಗಳಲ್ಲಿನ ಧಾರ್ಮಿಕ ಮುಖಂಡರುಗಳು ವಿಭಿನ್ನವಾದ ಹಗಲನ್ನೂ ಇರುಳನ್ನೂ ಹೊಂದಿರುತ್ತಿದ್ದರು. ಅದೇ ರೀತಿಯ ಭಿನ್ನತೆಯು ಕರ್ತನೂ ಮತ್ತು ಯಾವುದೇ ಧಾರ್ಮಿಕ ನಾಯಕರ ಮಧ್ಯ ಅಸ್ತಿತ್ವದಲ್ಲಿ ಇರುವುದಾಗಿತ್ತು. "ಯೇಸುವಿನ ಶಿಷ್ಯರನ್ನು ಹಿಂದಕ್ಕೆ ಎಳಕೊಳ್ಳುವರಾಗಿದ್ದರು" (ಅಪೊಸ್ತಲರ ಕೃತ್ಯಗಳು 20:30). ಏಕಾಂಗಿಯಾಗಿ ನಡೆಸಲ್ಪಡಬೇಡ. ಕ್ರಿಸ್ತನ ಮತ್ತು ಆತನ ಅಪೊಸ್ತಲರ ಬೋಧನೆಗಳನ್ನು ಮಾತ್ರ ಕೇಳು. ಯಾವ ಬದಲಿಯನ್ನು ಒಪ್ಪಿಕೊಳ್ಳದಿರು!

## ಬೇರೊಬ್ಬ ಕರ್ತನನ್ನು ಸ್ವೀಕರಿಸದಿರು
## (ಯೋಹಾನ 9:1-41)

ಯೇಸು ದೇವಾಲಯದಿಂದ ಹೊರಟ ಮೇಲೆ, ಆತನು "ಹಾದುಹೋಗುತ್ತಿರುವಾಗ ಒಬ್ಬ ಹುಟ್ಟುಕುರುಡನನ್ನು ಕಂಡನು" (ವಚನ 1). ಈ ಮನುಷ್ಯನು ಭಿಕ್ಷುಕನಾಗಿದ್ದನು (ವಚನ 8). ಭಿಕ್ಷೆಬೇ;ಲು ಒಂದು ಒಳ್ಳೆಯ ಸ್ಥಳವು ಕ್ರಿಸ್ತನು ಈಗಾಹಲೇ ಬೋಧಿಸುತ್ತಿದ್ದಂತಹ (ಯೋಹಾನ 8:20[22]) ಸ್ತ್ರೀಯರ ಮಂಟಪದ ಮುಖ್ಯ ಪ್ರವೇಶ ದ್ವಾರವಾಗಿತ್ತು (ಅಪೊಸ್ತಲರ ಕೃತ್ಯಗಳು 3:2). ಇನ್ನೊಂದು ಮಾತಿನಲ್ಲಿ, ಕರ್ತನೂ ಕೂಡಾ ತನ್ನ ಜೀವಿತಕ್ಕೋಸ್ಕರವಾಗಿ ಓಡುತ್ತಿರು ವಾಗಲೂ ಕೂಡಾ, ಆತನು ಒಬ್ಬ ಕುರುಡ ಮನುಷ್ಯನನ್ನು ವಾಸಿಮಾಡಲು ಸಮಯವನ್ನು ತೆಗೆದುಕೊಂಡನು ಇದು ಸಾಧ್ಯವಾದುದು ಆಗಿದೆ (ಯೋಹಾನ 9:6, 7).[23]

ಆ ಸ್ವಸ್ಥಮಾಡುವಿಕೆಯು ಸಬ್ಬತ್ ದಿನ ಆದುದು ಆಗಿದ್ದು (ವಚನ 14), ಇನ್ನೊಂದು ಸಬ್ಬತ್ತಿನ ವಿವಾದವನ್ನು ಪ್ರೇರೇಪಿಸಿತು.[24] ಈ ಸಮಯದಲ್ಲಿ, ಹೇಗೋ, ಈ ವಿಮರ್ಷೆಯ ಏಟನ್ನು ಪಡೆದವನು ಯೇಸುವಲ್ಲ, ಆದರೆ ಆಸ್ವಸ್ಥವಾದ ಮನುಷ್ಯನೇ ಆಗಿದ್ದನು. ಆತನು ಅಧಿಕಾರಿಗಳಿಂದ ಕರುಣಾರಹಿತವಾದ ವಿಚಾರಣೆ ಒಳಗಾದನು:[25] ಆದರೆ ಆತನು ತನ್ನ ಮನವರಿಕೆಯಲ್ಲಿ ಅಲುಗಾಡಲಿಲ್ಲ, ಅವರು ಅವನನ್ನು ಸಭಾಮಂದಿರದಿಂದ ಹೊರಗೆ ಹಾಕಿದಾಗಲೂ ಕೂಡಾ. ನಂತರದಲ್ಲಿ, ಕ್ರಿಸ್ತನು ಆತನನ್ನು ಕಂಡು ಮತ್ತು ಆತನಿಗೆ ತನ್ನನ್ನು ತಾನು ಪ್ರಕಟಿಸಿದ ನಂತರ "ನಂಬುತ್ತೇನೆ, ಸ್ವಾಮಿ ಎಂದು ಹೇಳಿ ಆತನಿಗೆ ಅಡ್ಡಬಿದ್ದನು" (ವಚನ 38).

ಈ ಚಿತ್ತಾಕರ್ಷಕ ಕಥೆಯು ಯೇಸುವಿನಲ್ಲಿ ನಂಬಿಕೆಯನ್ನು ಹುಟ್ಟಿಸಲು ಯೋಹಾನ ನಿಂದ ದಾಖಲಿಸಲ್ಪಟ್ಟದ್ದಾಗಿದೆ (ಯೋಹಾನ 20:30, 31). ಯೋಹಾನ 9:39-41ರಲ್ಲಿನ ಉತ್ತರಾರ್ಧವು ಇದನ್ನು ಸ್ಪಷ್ಟಪಡಿಸುವುದಾಗಿದೆ, ಹೇಗೋ, ಇನ್ನೊಂದು ಉದ್ದೇಶವು ಭೌತಿಕ ಕುರುಡುತನಕ್ಕೆ ಮತ್ತು ಆತ್ಮೀಕ ಕುರುಡುತನದ ಜೊತೆ ವ್ಯೆತ್ಯಾಸವಾಗಿದೆ. ಯೇಸುವನ್ನು ಮೆಸ್ಸೀಯನು ಎಂದು ಅಂಗೀಕರಿಸಲು ನಿರಾಕರಿಸುವವರು ಅದನ್ನು ಅರಿತುಕೊಳ್ಳುವುದಿಲ್ಲ. ಆದರೆ ಅವರು ಆತ್ಮೀಕವಾಗಿ ಕುರುಡರಾಗಿದ್ದು, ಅಜ್ಞಾನದ, ಪೂರ್ವಾಗ್ರಹದ ಮತ್ತು ಪಾಪದ ಕತ್ತಲೆಯಲ್ಲಿ ಸಿಕ್ಕುತ್ತಾರೆ.

ನಮ್ಮ ವಿಧೇಯತೆಯನ್ನು ಪ್ರದರ್ಶಿಸಲು ಇಂದು ಅಲ್ಲಿ "ಅನೇಕ ದೇವರುಗಳು" ಇವೆ (1 ಕೊರಿಂಥ 8:5), ಆದರೆ ಅವರೆಲ್ಲರೂ ಕುರುಡರು, ಮತ್ತೊಬ್ಬ ಕುರುಡನಿಗೆ ತೋರಿಸಲಿಕ್ಕೆ ಹೋಗುತ್ತಾರೆ (ಎಫೆಸ 4:5). "ಎಲ್ಲಾ ಕುರುಡನು ಕುರುಡನಿಗೆ ದಾರಿ ತೋರಿಸಿದರೆ ಅವರಿಬ್ಬರೂ ಕುಣಿಯಲ್ಲಿ ಬೀಳುವರು" (ಮತ್ತಾಯ 15:14). ಯಾವುದೇ ಬದಲಿಯನ್ನು ಸ್ವೀಕರಿಸದಿರು.

## ಯಾವುದೇ ನಾಯಕನನ್ನು ಸ್ವಿಕರಿಸದಿರು (ಯೋಹಾನ 10:1-21)

ಫರಿಸಾಯರ ಅವರ ಆತ್ಮೀಕ ಕುರುಡತನದ ವಿಷಯವಾಗಿ ಯೇಸುವಿನ ಮಾತುಗಳು (ಯೋಹಾನ 9:40, 41) ತಕ್ಷಣವೇ ಒಳ್ಳೆಯ ಕುರುಬನ ಉಪದೇಶದತ್ತ ಆತನನ್ನು ನಡೆಸಿತು. ವಚನ 1 ರಿಂದ 5 ಸಾಮಾನ್ಯವಾಗಿ "ಒಳ್ಳೆಯ ಕುರುಬನ ಸಾಮ್ಯ" ಎಂದು ಸೂಚಿತವಾಗಿದೆ (ನೋಡಿರಿ ವಚನ 6; KJV). ಹೊಸ ಒಡಂಬಡಿಕೆಯಲ್ಲಿ ಉಪಯೋಗಿಸಲಾದ "ಸಾಮ್ಯ" ಎಂಬ ಪದವು ವಿವಿಧವಾದ ರೂಪಕಗಳನ್ನು ಒತ್ತಿಹೇಳುವದ್ದಾಗಿದೆ ಎಂಬುದನ್ನು ನಾವು ಮನದಲ್ಲಿ ಇಟ್ಟಕೊಳ್ಳವದಕ್ಕೆ ಯೋಗ್ಯವಾದದ್ದಾಗಿದೆ.[26] ಯೋಹಾನನು ಗ್ರೀಕಪದವಾದ "ಸಾಮ್ಯ" (*parabole*) ಬಳಸಿದ್ದು, ಇದು "ದಾರಿಯ ಪಕ್ಕದಲ್ಲಿ" (*paroimia*) ಎಂಬ ಅರ್ಥವನ್ನು ಕೊಡುವುದಾಗಿದೆ. ಬಳಸಲಾದ ಭಾಷೆಯು ಒಂದು ರೀತಿಯಲ್ಲಿ ಬಳಿಕೆಯಾಗಬೇಕಾದದ್ದಕ್ಕಿಂತ ಬೇರೆಯಾಗಿ ಸಾಮಾನ್ಯ ರೀತಿಯಲ್ಲಿ ಈ ಇನ್ನೊಂದು ಪದದಲ್ಲಿ, ರೂಪಕವಾಗಿ ಬಳಿಕೆಯಾಗುವುದನ್ನು ಈ ಪದವು ಸೂಚಿಸುವುದಾಗಿದೆ.[27] NASBಯು ಪದವನ್ನು ವಚನ 6ರಲ್ಲಿ ರೂಪಕವಾಗಿ ಭಾಷಾಂತರಿಸಿದ; NKJVಯ "ದೃಷ್ಟಾಂತಗಳ" ಪದವನ್ನು ಬಳಸುವುದಾಗಿದೆ.

ಕ್ರಿಸ್ತನ ದೃಷ್ಟಾಂತವನ್ನು ಶ್ಲಾಘಿಸುತ್ತಾ, ಆತನ ಸಮಯದಲ್ಲಿರುವ ಕುರಿಗಳಿಗಾಗಿನ ಕಾಳಜಿಯ ಕೆಲ ವಿವರಣೆಗಳು ಈ ರೀತಿಯಲ್ಲಿ ಇರುವವು ಆಗಿವೆ.[28] ದಿನದ ಆರಂಭದಲ್ಲಿ, ಕುರಿಗಳ ಮಂದೆಯು ಮೈದಾನದ ಪ್ರದೇಶಕ್ಕೆ ಕುರುಬರಿಂದ ನಡೆಸಲ್ಪಡುತ್ತಿದ್ದವು. ರಾತ್ರಿಯಲ್ಲಿ, ಹಲವು ಬಾರಿಹಟ್ಟಿಯಲ್ಲಿ ಇಡಲ್ಪಡುತ್ತಿದ್ದವು.[29] ಇದೊಂದು ಒಂದೇ ಬಾಗಿಲಿನ ತೆರೆದ ಮಾಳಗೆಯ ಪ್ರದೇಶ ಆಗಿತ್ತು; ಇದು ಸಡಿಲು ಕಲ್ಲಿನ ಅಥವಾ ದಟ್ಟವಾದ ಮುಳ್ಳೀನ ಕಂಟಿಯ ಗೋಡೆಯನ್ನು ಹೊಂದಿತ್ತು. ಹೆಚ್ಚಿನ ಮಂದೆಗಳು ಕೆಲಸಾರಿ ಒಂದೇ ಹಟ್ಟಿಯಲ್ಲಿ ಬಾಗಿಲನ್ನು ನಿಶೇಧಿಸಿದಂತಹವುಗಳಿಗಾಗಿ ಒಬ್ಬ "ಬಾಗಿಲುಕಾಯುವವನ"[30] ಅಡಿಯಲ್ಲಿ ಇಡಲ್ಪಡುತ್ತಿದ್ದವು. ಮುಂಜಾನೆಯ ಸಮಯದಲ್ಲಿ, ಮೇಲ್ವಿಚಾರಕನು ಬಾಗಿಲನ್ನು ತೆರೆತ್ತಿದ್ದನು ಮತ್ತು ಕುರಿಗಳು ಹೊರಗೆ ಹೋಗುತ್ತಿದ್ದವು. ಪ್ರತಿಯೊಬ್ಬ ಕೂಗನ್ನು ಹಾಕುತ್ತಿದ್ದನು, ಮತ್ತು ಆತನ ಹಿಂಡಿನ ಮಂದೆಯು ಆತನೆಡೆಗೆ ಬರುತ್ತಿದ್ದವು. ಪ್ರತಿಯೊಂದೂ ಕುರಿಯು ತನ್ನ ಕುರುಬನ ಧ್ವನಿಯನ್ನು ಗುರುತಿಸುತ್ತಿತ್ತು. ಸಾಮಾನ್ಯವಾಗಿ, ಕುರುಬರು ಸಹಜವಾಗಿ ತಮ್ಮ ಕುರಿಗಳ ಯೋಗ ಕ್ಷೇಮದ ಬಗ್ಗೆ ಕಾಳಜಿಯುಳ್ಳವರಾಗಿರುತ್ತಿದ್ದರು; ಆದರೆ, ಯಾವುದೇ ಉದ್ಯೋಗದಲ್ಲಿ, ಕೇವಲ ಕುರಿಗಳ ಯಜಮಾನರಿಂದ ಪಡೆಯುವ ಸಂಬಳದಲ್ಲಿ ಆಸಕ್ತಿಯುಳ್ಳ ಕೆಲವರಿರುವುದು ನಿಜವಾದದ್ದು ಆಗಿದೆ.

ತನ್ನ ಹಿಂಬಾಲಕರಿಗಾಗಿನ ಆತನ ಪ್ರೀತಿ ಮತ್ತು ಕಾಳಜಿಯ ಬಲಯುತವಾದ ಬೋಧನೆಗಾಗಿ ಯೇಸು ಈ ವಿವರಗಳನ್ನು ಬಳಸಿದನು. ಆತನು ಅವುಗಳನ್ನು ತನಗೋಸ್ಕರ ಮತ್ತು ದೇವರ ಆತ್ಮೀಕ ಕುರುಬರು ಎಂದು ಪ್ರತಿಪಾದಿಸುವವರಿಗೆ ವ್ಯತ್ಯಾಸವಾಗಿ ಸಹ ಅವುಗಳನ್ನು ಬಳಸಿದನು.[31]

### ದೇವರು ಅನುಮೋದಿಸಿದ ನಾಯಕ

ಯೋಹಾನ 10ರಲ್ಲಿ ದೃಷ್ಟಾಂತವು ಅಸಮಾನ್ಯವಾದದ್ದಾಗಿದ್ದು ಇದು ಕ್ರಿಸ್ತನು ತನ್ನನ್ನು ತಾನು ಕುರಿಹಟ್ಟೆಯ ಬಾಗಿಲು (ವಚನಗಳು 7, 9) ಮತ್ತು ಕುರುಬ (ವಚನಗಳು 11, 14)

ಎಂದು ಸೂಚಿಸಿದ್ದಾನೆ. ಏನೇ ಆಗಲಿ, ಆತನು ಎರಡೂ ಆಗಿದ್ದಾನೆ ಮತ್ತು ಹೆಚ್ಚಾದವನು ಆಗಿದ್ದಾನೆ. ಆತನು ಎಲ್ಲವೂ ಆಗಿರುವುದಕ್ಕಾಗಿ ಒಂದೇ ಒಂದು ರೂಪಕವು ಸಾಕಷ್ಟಾಗದು.

"ನಾನೇ ಬಾಗಿಲು" (ವಚನಗಳು 7, 9) ಎಂದು ಯೇಸು ಹೇಳಿದಾಗ ತಂದೆಯನ್ನು ತಲುಪಲು ಆತನೊಬ್ಬನೇ ಮಾರ್ಗವಾಗಿದ್ದಾನೆ ಎಂಬುದನ್ನು ಒತ್ತಿ ಹೇಳಿದನು (ನೋಡಿರಿ ಯೋಹಾನ 14:6), ಹೊರಗೆ ಹೋಗುವುದರ ಸೂಚನೆಯು (10:9) ಆತನೊಬ್ಬನೆ ಸಂರಕ್ಷಣೆಯ ಮತ್ತು ಸುರಕ್ಷತೆಯ ಒಂದೇ ಒಂದು ಮಾರ್ಗ (ಕುರಿಗಳು ಹಟ್ಟಿಯೊಳಕ್ಕೆ ಹೋಗುತ್ತಿದ್ದವು) ಮತ್ತು ಸ್ವಾತಂತ್ರ್ಯ ಮತ್ತು ಸಂತೃಪ್ತಿಯ ಒಂದೇ ಮಾರ್ಗವು (ಮಂದೆಯ ಹುಲ್ಲುಗಾವಲಕ್ಕೆ ಹೋಗುತ್ತದೆ) ಆತನಾಗಿದ್ದಾನೆ ಎಂಬ ಇದೊಂದು ಅಲಂಕಾರಾತ್ಮಕವಾದ ರೀತಿಯಾಗಿದೆ.[32]

ಈ ಭಾಗದ ವೇದವಾಕ್ಯವನ್ನು ಅನೇಕರು ಮೆಚ್ಚುವವರಾಗಿರುತ್ತಾರೆ ಯಾಕೆಂದರೆ ಇದು ಯೇಸು ಒಳ್ಳೆಯ ಕುರುಬನು ಎಂಬ ಚಿತ್ರಣವು ಇದಾಗಿದೆ (ವಚನಗಳು 11, 14; ನೋಡಿರಿ ವಚನ 2). ಕುರುಬನಂತೆ, ಕ್ರಿಸ್ತನು ತನ್ನ ಕುರಿಗಳನ್ನು ಬಲ್ಲವನಾಗಿದ್ದಾನೆ (ವಚನ 14). ಆತನು ತನ್ನ ಮಂದೆಯನ್ನು ನಡೆಸುವವನಾಗಿದ್ದಾನೆ (ವಚನ 13) "ಅವುಗಳನ್ನು ಆತನು" "ವಿಶ್ರಾಂತಿಕರವಾದ ನೀರುಗಳೆಡೆಗೆ" ಮತ್ತು "ನೀತಿಯ ಮಾರ್ಗದಲ್ಲಿ" ನಡೆಸುವವನಾಗಿದ್ದಾನೆ (ಕೀರ್ತನೆ 23:2, 3). ಆತನ ಕುರಿಗಳು ಆತನ ಸ್ವರವನ್ನು ಬಲ್ಲವುಗಳು ಆಗಿವೆ ಮತ್ತು ಆತನನ್ನು ಹಿಂಬಾಲಿಸುವವುಗಳು ಆಗಿವೆ (ಯೋಹಾನ 10:3, 4). ತನ್ನ ಸುರಕ್ಷತೆಗಾಗಿ ಅಲ್ಲ ಆದರೆ ತನ್ನ ಕುರಿಗಳ ಸುರಕ್ಷತೆಯೇ ಆತನಿಗೆ ಮುಖ್ಯ ಆಗಿದೆ (ವಚನ 10[33]). ಆತನು ಅವುಗಳನ್ನು ಸಂರಕ್ಷಿಸುವವನೂ (ವಚನ 12ರಲ್ಲಿ ಸೂಚಿತವಾದಂತೆ) ಮತ್ತು ಅವುಗಳಿಗಾಗಿ ಮರಣಿಸಲೂ ಸಿದ್ಧನಾದವನೂ ಆಗಿದ್ದಾನೆ (ವಚನಗಳು 11, 17, 18)!

ವಚನ 17 ಮತ್ತು 18 ಸಂಬಂಧಿಸಿದಂತೆ John Franklin ಹೀಗೆ ಬರೆಯುತ್ತಾರೆ, ಆತನು ಯಾವುದರಿಂದ ಮರಣಿಸಿದನು ಅಥವಾ ಜೀವಿತನಾಗಿ ಮರಳಿ ಏಳಲು ಸಹಾಯಕವಾದ ಶಕ್ತಿಯ ಬಗೆಗೆ ಈಗ ಬೈಬಲ್ಲಿನಲ್ಲಿ ಅಲ್ಲೊಂದು ಸ್ಪಷ್ಟವಾದ ಒಪ್ಪಿಸಿಕೊಳ್ಳುವಿಕೆಯ ಹೇಳಿಕೆಯು ಇದೆ."[34] ನನ್ನ ಬೈಬಲ್ಲಿನಲ್ಲಿ ಅ ವಚನಗಳನ್ನು ಗುರುತು ಹಾಕಿಕೊಳ್ಳಬಹುದು. ಕ್ರಿಸ್ತನಿಗಾದ ದ್ರೋಹ, ಕಷ್ಟ ಮತ್ತು ಮರಣದ ಬಗ್ಗೆ ಅಭ್ಯಸಿಸುವಾಗ ಅವುಗಳನ್ನು ಮನದಲ್ಲಿ ಇಟ್ಟುಕೊಳ್ಳ ಬೇಕು. ಆತನ ಕ್ರೂಜೆಯ ಮರಣವು ಆತನು ತಪ್ಪಿಸಿಕೊಳ್ಳಲು ಅಸಾಧ್ಯವಾದಂತಹ ಶೋಚನಯವಾದ ವಿಫಲತೆಯು ಅಲ್ಲ ತನ್ನ ಕುರಿಗಳಿಗಾಗಿ ಮಾಡಲ್ಪಟ್ಟ ಸ್ವಯಂಪೂರ್ವಕ ಬಲಿಯು ಇದಾಗಿದೆ.

ವಚನ 16ರಲ್ಲಿನ, "ಈ ಹಟ್ಟಿಗೆ ಸೇರಿದಿರುವ ಇನ್ನೂ ಬೇರೆ ಕುರಿಗಳು ನನಗೆ ಅವೆ, ಅವುಗಳನ್ನೂ ನಾನು ತರಬೇಕು." ಅವು ನನ್ನ ಸ್ವರಕ್ಕೆ ಕಿವಿಗೊಡುವವು ಆಗ ಒಂದೇ ಹಿಂಡು ಆಗುವದು, "ಒಬ್ಬನೇ ಕುರುಬನಿರುವನು" ಎಂಬ ಮಾತಿನಿಂದ ನಾವು ಸಂತೋಷಪಡ ಬೇಕು. "ಇತರ ಕುರಿಗಳು" ಇನ್ನೊಂದು ಮಾತಿನಲ್ಲಿ ಇದು ಅನ್ಯಜನರನ್ನು ಸೂಚಿಸುವದು ಆಗಿದ್ದು ಹೆಚ್ಚಿನವರು ಈ ಪಾಠದಲ್ಲಿ ನೀನು ಕಲಿಯುವವರೇ ಆಗಿದ್ದಾರೆ ಕ್ರಿಸ್ತನು ಎಲ್ಲ ಮನುಷ್ಯರನ್ನೂ ಪ್ರೀತಿಸಿದನು; ಆತನು ತನ್ನ ಪ್ರಾಣವನ್ನು *ಎಲ್ಲ* ಮನುಷ್ಯರಿಗಾಗಿ ಕೊಟ್ಟನು. ಆತನು ಸಾರ್ವತ್ರಿಕ ಕುರುಬನಾಗಿದ್ದಾನೆ.

**ತಮಗಾಗಿ ಸೇವೆ ಮಾಡಿಕೊಳ್ಳುವ ನಾಯಕರು**

ದೇವರ ತ್ಯಾಗದ ಸ್ವಭಾವವು ಆತನ ದಿನದಲ್ಲಿನ ತಮಗಾಗಿ ಸೇವೆ ಮಾಡಿಕೊಳ್ಳುವ ಧಾರ್ಮಿಕ ನಾಯಕರುಗಳೊಂದಿಗೆ ವೈತ್ಯಾಸಮಾಡಲ್ಪಟ್ಟಿದೆ. ಅವರು ಯೊಹೂದಿಗಳ ಮೇಲೆ ದೇವರ ಕುರುಬರಾಗಿದ್ದರು, ಆದರೆ ತಮ್ಮ ಕಾರ್ಯವನ್ನು ಮಾಡುವಲ್ಲಿ ಹೀನವಾಗಿ ವಿಫಲರಾದರು (ನೋಡಿರಿ ಯಾಜಕಕಾಂಡ 34:1-6; ಯೆರೆಮಿಯ 33:1-6; ಜೆಕರ್ಯ

11:4-11; ಮತ್ತಾಯ 9:36; ಮಾರ್ಕ 6:34):

- ಕುರುಬರಾಗಿರುವುದರ ಬದಲು ದೇವರ ಚಿತ್ತವನ್ನು ಮಾಡಲು ಕಾತುರವುಳ್ಳವರಾಗಿರುತ್ತಾರೆ, ಅವರು ಕಳ್ಳರೂ, ಸುಲುಕೊಳ್ಳುವವರೂ ಆಗಿದ್ದು ಹಟ್ಟಿಯೊಳಗೆ ಬೇರೊಂದು ಮಾರ್ಗದಿಂದ ಪ್ರವೇಶಿಸುವವರಾಗಿದ್ದು, ತಮ್ಮ ಸ್ವಂತ ಜೇಬನ್ನು ಮಾತ್ರ ತುಂಬಿಕೊಳ್ಳುವಲ್ಲಿ ಆಸಕ್ತಿಯುಳ್ಳವರಾಗಿರುತ್ತಾರೆ (ಯೋಹಾನ 10:1, 8).
- ಕುರಿಗಳನ್ನು ಬಲ್ಲವನೂ ಮತ್ತು ಅವುಗಳಲ್ಲಿ ವೈಯಕ್ತಿಕ ಆಸಕ್ತಿಯನ್ನು ಹೊಂದಿದವನು ಆದ ಕುರುಬನಾಗಿರುವುದರ ಮೂಲಕ ಅಪರಿಚಿತರಿಗಿಂತ ಭಿನ್ನ ರಾಗಿರುತ್ತಾನೆ (ಯೋಹಾನ 10:5).
- ಅಪಾಯವನ್ನು ಎದುರಿಸಿ ಕುರಿಗಳನ್ನು ರಕ್ಷಿಸುವ ಕುರುಬರಾಗಿರುವ (ನೋಡಿರಿ 1 ಸಮುವೇಲ 17:34-37) ಬದಲು ತಮ್ಮ ಸ್ವಂತ ರಕ್ಷಣೆಯನ್ನು ಪರಿಗಣಿಸುವವರಾ ಗಿರುತ್ತಾರೆ. ಅವರು ಭಾಡಿಗೆಯವರ" ಮಾನಸಿಕ ಮಟ್ಟವನ್ನು[36] ಹೊಂದಿರುತ್ತಾರೆ; ಅವರು ತಮ್ಮ ದಿನನಿತ್ಯದ ಸಂಬಳದ ಬಗೆಗೆ ಕಾಳಜಿಯಳ್ಳವರಾಗಿರುತ್ತಾರೆ. ಕುರಿಗಳ ಯೋಗಕ್ಷೇಮ ಕುರಿತು ಅಲ್ಲ (ಯೋಹಾನ 10:11, 12).

ಜಗತ್ತು ಇಂದು ತಮ್ಮನ್ನು ಆರಾಧಿಸುವ ಹಿಂಡನ್ನು ನಿಯಮಿತವಾಗಿ ಲೂಟಿ ಗೊಳಪಡಿಸಿಕೊಳ್ಳಲು ಸುತ್ತಲೂ ಸೇರಿಸಿಕೊಳ್ಳುವ ಆಸಕ್ತಿಯನ್ನು ಹೊಂದಿದ ಅನುಕೂಲಕರ ವಾದ ಧಾರ್ಮಿಕ ಮುಖಂಡರಿಂದ ತುಂಬಿಕೊಂಡಿದೆ. ಮೋಸಕ್ಕೊಳಗಾಗದಿರು. ನಿಜವಾದ ಕುರುಬನು "ಹಿರಿ ಕುರುಬನಾಗಿದ್ದಾನೆ" (1 ಪೇತ್ರ 5:4), "ಒಳ್ಳೆಯ ಕುರುಬನು" (ಯೋಹಾನ 10:11, 14) ಆದ ಯೇಸುಕ್ರಿಸ್ತನು ಆಗಿದ್ದಾನೆ,[37] ಯಾವುದೇ ಬದಲಿಯನ್ನು ಸ್ವೀಕರಿಸದಿರು.

## ಮುಕ್ತಾಯ

ಬೇರ್‍ಯಾವ ಬೆಳಕನ್ನೂ ನಾವು ಒಪ್ಪಿಕೊಳ್ಳಬಾರದು. ಬೇರೆ ಇತರ "ಬೆಳಕುಗಳು" ಕೇವಲ ಕತ್ತಲೆಯನ್ನು ತರುವವು ಆಗಿವೆ. ನಾವು ಬೇರೆಲ್ಲ ದೇವರುಗಳನ್ನು ಒಪ್ಪಿಕೊಳ್ಳಬಾರದು. ಇನ್ನಿತರ "ದೇವರುಗಳು" ಅನುಕೂಲಕರವಾದವುಗಳು ಆಗಿರುತ್ತವೆ. ಬೇರ್‍ಯಾವ ನಾಯಕನನ್ನೂ ನಾವು ಒಪ್ಪಿಕೊಳ್ಳಬಾರದು. ಯಾವುದೇ "ನಾಯಕನು" ನಮ್ಮನ್ನು ತಪ್ಪಾದ ಮಾರ್ಗದಲ್ಲಿ ನಡೆಸಬಹುದು. ಯೇಸುವನ್ನು ಮಾತ್ರ ಹಿಂಬಾಲಿಸು. ಯಾವುದೇ ಬದಲಿಯನ್ನು ಸ್ವೀಕರಿಸದಿರು.

ಇದಕ್ಕೆ ಪ್ರತಿಯಾಗಿ ಕ್ರಿಸ್ತನು ಬೆಳಕಾಗಿರಲು ಪ್ರತಿಪಾದಿಸಿದಾಗ, ದೇವರುಗಳು ಮತ್ತು ನಾಯಕರು, ಮತ್ತು ಆತನ ಮಾತನ್ನು ಕೇಳಿದವರು ಬೇರೆಯಾದರು (ಯೋಹಾನ 10:19). "ಅವನಿಗೆ ದೆವ್ವಹಿಡಿದದೆ, ಹುಚ್ಚುಹಿಡಿದದೆ" ಎಂದು ಕೆಲವರು ಹೇಳಿದರು (ಯೋಹಾನ 10:20). ಮತ್ತೂ ಕೆಲವರು "ಇದು ದೆವ್ವಹಿಡಿದವರ ಮಾತುಗಳಲ್ಲ; ದೆವ್ವವು ಕುರುಡರಿಗೆ ಕಣ್ಣುಕೊಡಬಲ್ಲದೆ?" ಎಂದು ಮಾತಾಡಿಕೊಂಡರು (ಯೋಹಾನ 10:21). ಯೇಸುವಿನ ಬಗ್ಗೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ನಿರ್ಧಾರವನ್ನು ಮಾಡಬೇಕು. ನೀವು ಆತನನ್ನು ನಿಮ್ಮ ಬೆಳಕನಾಗಿಯೂ, *ನಿಮ್ಮ* ಕರ್ತನನ್ನಾಗಿಯೂ ಮತ್ತು ನಿಮ್ಮ ನಾಯಕನನ್ನಾಗಿಯೂ ಸ್ವೀಕರಿಸಬೇಕು ಎಂದು ಪ್ರಾರ್ಥಿಸುವವನಾಗಿದ್ದೇನೆ.

ಆತನನ್ನು ನಮ್ಮ ಬೆಳಕನ್ನಾಗಿ, ಕರ್ತನನ್ನಾಗಿ, ಮತ್ತು ನಾಯಕನಾನ್ನಾಗಿ ಹೇಗೆ ಸ್ವೀಕರಿಸಬೇಕು? ಏನೇ ಆಗಲಿ ಯಾವ ಅಂಶವು ಇಲ್ಲಿ ಬಳಸಲ್ಪಟ್ಟರೇನು, ಅವಶ್ಯಕತೆಗಳು ಮಾತ್ರ ಒಂದೇ ಆಗಿವೆ:

- ನಾವು ಆತನನ್ನು ಕೇಳಬೇಕು (ಯೋಹಾನ 10:3-5, 16).
- ನಾವು ಆತನನ್ನು ನಂಬಬೇಕು (ಯೋಹಾನ 8:24; 9:38).
- ನಾವು ಆತನನ್ನು ಹಿಂಬಾಲಿಸಬೇಕು (ಯೋಹಾನ 10:4; 8:12). ಮತ್ತು ಆತನ ಚಿತ್ತವನ್ನು ಮಾಡಬೇಕು (ಯೋಹಾನ 8:31, 52).[38]

ಅ ಹಸಿರಾದ ಹುಲ್ಲು ಎಲ್ಲಿದೆ ಅಥವಾ ಲೂಟಿ ಮಾಡುವ ಕೆಡುಕನನ್ನು ತಿಳಿದಿರುವವುಗಳು ಒಳ್ಳೆಯ ಕುರಿಗಳು ಅಲ್ಲ. "ಬದಲಾಗಿ ಕುರುಬನ ಅವಷಕತೆಯ ಬಗ್ಗೆ ಅರಿತಿರುವವುಗಳೇ ಒಳ್ಳೆಯ ಕುರಿಗಳು ಆಗಿವೆ" ಎಂದು ಕೆಲವರು ಹೇಳುತ್ತಾರೆ.[39] ಒಳ್ಳೆಯ ಕುರುಬನ ಅವಷ್ಯಕತೆಯು ನಿನಗುಂಟು ಎಂದು ನೀನು ತಿಳಿದಿದ್ದಾರೆ ಇಂದೇ ಆತನ ಬಳಿಗೆ ನೀನು ಬರುವಿ ಮತ್ತು ಪ್ರತಿದಿನ ಆತನನ್ನು ಹಿಂಬಾಲಿಸುವಿ!

## ಮಾಹಿತಿ

"ಜಗತ್ತಿನ ಬೆಳಕು" ಈ ಪ್ರಸಂಗವು ಯೇಸುವಿನ ಮೇಲಿನ ಪ್ರಸಂಗಿಸಲಾಗಿದೆ (James Burton Coffman, *Commentary on John* [Austin, Tex.: Firm Foundation Publishing House, 1974], 233–34 ನೋಡಿರಿ). ಯೋಹಾನ 9ರ ಮೇಲಿನ ಪ್ರಸಂಗವು ನಂತರದಲ್ಲಿ ಈ ಪುಸ್ತಕದಲ್ಲಿ ಸಿಕ್ಕುವದಾಗಿದೆ. ಯೇಸುವಿನ ಮೇಲಿನ "ಒಳ್ಳೆಯ ಕುರುಬನು" ಎಂಬ ಪ್ರಸಂಗವನ್ನು ನಾನು ಸೇರಿಸಲು ಬಯಸಿದ್ದೇನೆ, ಆದರೆ ಸ್ಥಳದ ಕೊರತೆಯ ನನಗೆ ಅವಕಾಶವಿರಲಿಲ್ಲ.

ಈ ವೇದಭಾಗದ ಮತ್ತೇ ಕೆಲವು ಪ್ರಸಂಗದ ವಿಚಾರಗಳು ಇಲ್ಲಿವೆ: ಯೋಹಾನ 7:25ನ್ನು ಮತ್ತು 8:53ರನ್ನು "ನಿಜವಾಗಿಯೂ, ಆತನು ಯಾರು?" ಎಂಬ ಪ್ರಸಂಗವನ್ನು ಬೋಧಿಸಲು ಬಳಸಬಹುದು "ಯೇಸುವನ್ನು ನೀವು ಯಾರೆಂದು ಯೋಚಿಸುತ್ತೀರಿ?" ಎಂದು ನಿಮ್ಮ ಕೇಳುಗರಿಗೆ ಸವಾಲನ್ನು ಮಾಡಿರಿ.

ಯೋಹಾನ 9:25ರಲ್ಲಿನ "... ಏನೋ ನಾನರಿಯೆನು. ಒಂದು ಮಾತ್ರಬಲ್ಲೆ, ಕುರುಡನಾಗಿದ್ದೆನು, ಈಗ ಕಣ್ಣುಕಾಣುತ್ತವೆ" ಎಂಬ ಭಿಕ್ಷುಕನ ಮಾತಗಳನ್ನು ನಾನು ಮೆಚ್ಚುವವನಾಗಿದ್ದೇನೆ. *"ಒಂದು ಮಾತ್ರ ಬಲ್ಲೆನು"* ಎಂಬುದರ ಮೇಲೆ ನೀವು ಪ್ರಸಂಗಿಸಬಹುದು, ಆದರೆ ಈ ಸತ್ಯಗಳನ್ನು ನಾವು ಬಲ್ಲೆವು. ಮತ್ತು ತಿಳಿಯುತ್ತಾ ಇದ್ದೇವೆ. ಇನ್ನೊಂದು ಮಾತಿನಲ್ಲಿ ಖಚಿತವಾಗಿ ಏನನ್ನು ತಿಳಿದಿರುವೆಯೋ ಅದರ ಮೇಲಿನ ಸರಳವಾದ ಪ್ರಸಂಗ ಇದಾಗಬಹುದು.

ಒಳ್ಳೆಯ ಕುರುಬನ ಈ ಭಾಗವು "ಕುರುಬರಾಗಿರುವುದರ ಅರ್ಥವೇನಾಗಿಬೇಕು" ಎಂದು ಹಿರಿಯರಿಗೆ ಪ್ರಸಂಗವಾಗಿ ಉಪಯೋಗಿಸಲ್ಪಡಬಹುದು.

---

ಟಿಪ್ಪಣಿಗಳು

[1]ಇದು ಯೋಹಾನ 9:1-10:21 ಸಮರ್ಪಣೆಯ ದಿನದಲ್ಲಿ ಸಂಭವಿಸಿದ್ದಾಗಿರಬಹುದು ಎಂದು ಕೆಲವರು ನಂಬುವವರಾಗಿದ್ದಾರೆ (ಯೋಹಾನ 10:22), ಈ ಸಾಧ್ಯತೆಯೂ ಇದೆ. ಅಲ್ಲಿ ಹೇಗೋ, ಯೋಹಾನ 9 ಮತ್ತು ಗುಡಾರಗಳ ಹಬ್ಬದ ಅಧ್ಯಾಯಗಳ ಮಧ್ಯ ಒಂದು ಹತ್ತಿರದ ಬಂಧವು ಇದೆ (ಯೋಹಾನ 7:13ರೊಡನೆ ಯೋಹಾನ 9:22, ಮತ್ತು ಯೋಹಾನ 8:12ರೊಡನೆ ಯೋಹಾನ 9:5ನ್ನು ಹೋಲಿಸಿರಿ); ಯೋಹಾನ 9:1-10:21 ಅದೇ ಅವಧಿಯ ಸಮಯದ ಮುಂದುವರಿಕೆಯನ್ನು ಹೊಂದಿರಬಹುದೆಂದು ಕಾಣುತ್ತದೆ. ಯೋಹಾನ 8:59 ಮತ್ತು ಯೋಹಾನ 9:1ರ ಮಧ್ಯ ಅಲ್ಲೊಂದು ತರದ ತಡೆಯು ಇದೆ, ಮತ್ತು ಯೂದಾಯದ ನಂತರದ ಸೇವೆಯ ಕೆಲ ಘಟನೆಗಳು ಇಲ್ಲಿ ಸೇರಿರುವ

ಸಾಧ್ಯತೆಗಳು ಇವೆ. ಅವುಗಳನ್ನು ನಮ್ಮ ಮುಂದಿನ ಪಾಠದಲ್ಲಿ ಚರ್ಚಿಸುವಾ. [2]ಯೋಹಾನ 6:3, 5; 8:12, 58; 10:11; 11:25; 14:6; 15:1ನೋಡಿರಿ. [3]ಒಳ್ಳೆಯ ಕುರುಬನು ಎಂಬ ದೃಷ್ಟಾಂತಕ್ಕೆ ಸಂಬಂಧಿಸಿದಂತೆ, "ಯೇಸು ನಾನೇ ಬಾಗಿಲಾಗಿದ್ದೇನೆ" (10:7, 9) ಎಂದೂ ಸಹ ಹೇಳಿದಂಥದ್ದು ಕೂಡಾ "ನಾನು ಇದ್ದೇನೆ" ಎಂಬ ಹೇಳಿಕೆಯ ಪಟ್ಟಿಯಲ್ಲಿ ಸೇರಿಸಲಾಗಿದೆ. [4]ಸ್ತ್ರೀಯರ ಮಂಟಪವು ಸ್ತ್ರೀಯರು ಮತ್ತು ಪುರುಷರೂ ಕೂಡಾ ಹೋಗಬಹುದಾದ ಯೆಹೂದ್ಯರ ದೇವಾಲಯದ ಭಾಗವಾಗಿತ್ತು. ದಿನಕ್ಕೆ ಎರಡವರ್ತಿ ಪ್ರಾರ್ಥನೆಗಾಗಿ ಸೇರುವ ವಿಶೇಶ ಸ್ಥಳವು ಇದಾಗಿತ್ತು. [5]ಹಣವು ಈ ಪೆಟ್ಟಿಗೆಗಳಲ್ಲಿ ದೇವಾಲಯದ ವಿಶೇಶ ಸಮಾರಂಭಗಳಿಗಾಗಿ ಮತ್ತು ಔತಣಕೂಟ ಅಥವಾ ಸ್ವ ಪ್ರೇರಣೆಯ ಕೊಡುವಿಕೆಗಾಗಿ ಬಳಸಲಾಗುತ್ತಿತ್ತು. [6]ದೊಡ್ಡ ದೀಪದ ವಿವರಣೆಗಾಗಿ, "ಜೀವಕರವಾದ ನೀರು" ಎಂಬ ಇತ್ತೀವಿನ ಪಾಠವನ್ನು ಪುನರಾವರ್ತಿಸಿರಿ. [7]H. I. Hester, *The Heart of the New Testament* (Liberty, Mo.: Quality Press, 1963), 164–65. [8]*ಕ್ರಿಸ್ತನ ಜೀವಿನ ಚರಿತ್ರೆ, 2ನೇ* ಪುಸ್ತಕದಲ್ಲಿನ "ಕೂಡಿಳ್ಳುತ್ತಿರುವ ಬಿರುಗಾಳಿ" ಮತ್ತು "ದೇವರೊಡನೆ ಸಮಾನವಾಗಿ ರುವದು" ಎಂಬ ಅಧ್ಯಾಯಗಳನ್ನು ನೀವು ಪುನರಾವರ್ತಿಸಬಹುದು. [9]The Living Bible ಪದಗುಚ್ಛವನ್ನು ನೋಡಿರಿ. ಇದೊಂದು U.S.ದ ವಿವರಣೆಯಾಗಿದೆ. ನೀವು ಇರುವ ಸ್ಥಳದಲ್ಲಿ ಇದಕ್ಕೆ ಸಮಾನವಾದದ್ದನ್ನು ಹೊಂದಿರಬಹುದು. [10]"ಅಪೊಸ್ತಲರು" ಎಂಬುದರ ಅಕ್ಷರಸಹ ಅರ್ಥವು ಹೊರಕ್ಕೆ ಕಳುಹಿಸು ಎಂದಾಗಿದೆ. ಹನ್ನೆರೆಡು ಜನರು ಯೇಸುವಿನ ಅಪೊಸ್ತಲರು ಆಗಿದ್ದರು.ಯೇಸು ದೇವರ ಅಪೊಸ್ತಲನು ಆಗಿದ್ದನು.

[11]ಆತನ ವೈರಿಗಳು ಆತನ ಮೇಲೆ ಆರೋಪಹೊರಿಸಲು ಪ್ರಯತ್ನಿಸಿದರು, ಆದರೆ ಅವರಿಗೆ ಮಾಡಬಹುದಾದ ಒಳ್ಳೆಯ ಕೆಲಸವು ಆತನು ಸಬ್ಬತ್ತನ್ನು ಮುರಿದುದದರ ಬಗೆಗೆ ಕೊಂಕು ನುಡಿಯುವದೇ ಆಗಿತ್ತು. [12]ಯೋಹಾನ 8:24, ಹಿಂದಿನ ಪಾಠದ ಬಗೆಗೆ ("ಯೆರೂಸಲೇಮಿನ ಪಯಣ") ವಿವರವಾಗಿ ಸೂಚಿಸುವುದು ಆಗಿದೆ. ಯೇಸು ಮೆಸ್ಸೀಯನು ಎಂದು ನಂಬುದರ ಬಗೆಗೆ ಸಾಮಾನ್ಯ ಹೇಳಿಕೆಯನ್ನು ಕೊಡುವುದೇ ಆಗಿತ್ತು, ಆದರೆ ಅದಕ್ಕಿಂತ ಹೆಚ್ಚಾಗಿ ಅದು ಸೂಚಿತವಾದದ್ದೂ ಆಗಿತ್ತು. ಆತನು ಎಂಬ ಪದವು ಇಟ್ಯಾಲಿಕ್‌ನಲ್ಲಿರುವುದನ್ನು ಗಮನಿಸಿರಿ. ಅಕ್ಷರಸಹ, "ನಾನು ಆಗಿದ್ದೇನೆ" ಅದು ದೇವರು ಎಂದು ಅವರು ನಂಬಬೇಕೆಂದು ಕ್ರಿಸ್ತನು ಹೇಳಿದನು (ಈ ಹೇಳಿಕೆಯನ್ನು ಯೋಹಾನ 8:58ರೊಡನೆ ಹೋಲಿಸಿರಿ). [13]ಆತನಲ್ಲಿ ನಂಬಿಕೆ (ಇಡುವುದರ) (ವಚನ 30) ಮತ್ತು ಆತನನ್ನು ನಂಬುವುದರ (ವಚನ 31) ಮಧ್ಯ ಇರುವ ಭಿನ್ನತೆಯನ್ನು ಅನೇಕ ಲೇಖಕರು ಸೂಚಿಸುವವರಾಗಿದ್ದಾರೆ. ಇದು ಸಾಧ್ಯವಿರುವುದಾಗಿದೆ, ಆದರೆ ವಚನ 31 ವಚನ 30ನ್ನು ಅನುಸವರಿಸುವಂತೆ ಕಾಣುತ್ತದೆ. ಆತನಲ್ಲಿ ಯಾರು ನಂಬಿಕೆ ಇಡಲು ಆರಂಭಿಸಿದರೋ. ಅವರು ನಂಬಿಕೆಯು ಏನನ್ನು ಸಂಭವಿಸುವಂತೆ ಮಾಡವುದು ಎಂದು ಅರಿತುಕೊಳ್ಳಬೇಕೆಂದು ಯೇಸು ಬಯಸಿದ್ದನು. [14]ಈ ವೇದ ಭಾಗದಲ್ಲಿನ "ಯೇಹೂದಿಗಳು" ಎಂಬಪದವು ಸಾಮಾನ್ಯವಾಗಿ ಯೆಹೂದಿ ನಾಯಕರನ್ನು ಸೂಚಿಸುವುದಾಗಿದೆ. (ನೋಡಿರಿ ಪುಟ 28). [15]ಇದು ಹಲವು ಬಾರಿ ವ್ಯಾಖ್ಯಾನಿಸಿದ ಭಾಗವು ಆಗಿದ್ದು ಸಾಮಾನ್ಯವಾಗಿ ಸಹದವಾಗಿರುವ ಸತ್ಯವನ್ನು ಅನ್ವಯಿಸುವುದಾಗಿದೆ. ಸಂದರ್ಭಾನುಸಾರವಾಗಿ, ಯೇಸುವಿನಿಂದ ಮಾತನಾಡಲ್ಪಟ್ಟ ಆತ್ಮೀಕ ಸತ್ಯವನ್ನು, ವಿಶೇಶವಾಗಿ ಆತನು ಯಾರಗಿದ್ದಾನೆ, ಮತ್ತು ಆತನು ಬಂದದೇಕ್ಕೆ ಎಂಬ ಸತ್ಯವನ್ನು ಸೂಚಿಸುವುದಾಗಿದೆ. ಅಸತ್ಯವು ಅದೇಕ್ಕೆ ಜೊತೆಯಾದ ಧರ್ಮಶಾಸ್ತ್ರದ ಕ್ರೂರ ಶಾಸನದಿಂದ ಮತ್ತು ಎಲ್ಲ ಮಾನವ ಸಂಪ್ರದಾಯಗಳಿಂದ ಅವರನ್ನು ಬಿಡುಗಡೆಗೊಳಿಸುವುದಾಗಿದೆ. [16]ಇಸ್ರಾಯೇಲರು ಬೆಬಿಲೋನ್ ಮತ್ತು ಪರ್ಷಿಯಾ ದೇಶದಲ್ಲಿ ದಾಸರಾಗಿದ್ದಾಗಿನಿಂದ ಈ ವಿಚಿತ್ರ ವಾದ ಪ್ರತಿಪಾದನೆಯು ಇದೆ. ಯೇಸುವಿನ ಜೀವಿತಾವದಿಯ ಆರಂಭದಲ್ಲಿ ರೋಮದವರಿಗೆ ಯೆಹೂದಿಗಳು ವಸ್ತುವಾಗಿದ್ದರು. [17]ಪಾಪದ ದಾಸರಾಗುವ ಬಗೆಗಿನ ಹೇಳಿಕೆಯು ಹೊಸ ಒಡಂಬಡಿಕೆಯ ಇತರ ಭಾಗದಲ್ಲಿಯೂ ಪ್ರತಿಧ್ವನಿತವಾಗುತ್ತಿದೆ (ನೋಡಿರಿ ರೋಮಾಪುರ 6:16-18). [18]ಸೈತಾನ ಮತ್ತು ಆತನ ಕಾರ್ಯಗಳ ಯೋಹಾನ 8:44 ಬಗ್ಗೆ ಸಂಕ್ಷಿಪವಾದ ಹೇಳಿಕೆಯಾಗಿದೆ. "ಸುರುವಿನಿಂದಲೂ ಕೊಲೆಗಾರ" ಬಹುಶ ಇದು ಆತನು ಪಾಪದಲ್ಲಿ ಒಳಗೊಂಡ ಜಗತ್ತಿನಲ್ಲಿರುವ ದೈಹಿಕ ಮರಣವನ್ನು ತರುವಂಥ ಸಂದರ್ಭವನ್ನು ಸೂಚಿಸುವುದಾಗಿರಬಹುದು. [19]ಯೇಸು ಒಬ್ಬ "ಸಮಾರ್ಯದವನು" ಎಂದು ಕರೆದಾಗ, ಆತನು ಸಮಾರ್ಯದಲ್ಲಿ ಹುಟ್ಟಿದವನು ಎಂದು ಸೂಚಿಸುತ್ತಿಲ್ಲ. ಬದಲಾಗಿ, ಅಪಮಾನ ಮಾಡುವುದಕ್ಕಾಗಿಯೇ; ಯೆಹೂದಿಗಳು ಸಮಾರ್ಯದವರನ್ನು ದ್ವೇಷಿಸುತ್ತಿದ್ದರು ಅವರನ್ನು ಕೀಳಾಗಿ ಕಾಣುತ್ತಿದ್ದರಿ. ಜಗತ್ತಿನ ಅನೇಕ ಕಡೆಗಳಲ್ಲಿ ಜನರು ತಾವು ದ್ವೇಷಿಸುವವರನ್ನು ಅವಮಾನಪಡಿಸಲು ಪ್ರಾದೇಶಿಕ ಉಪಧಿಕವನ್ನು ಬಳಸುವವರಾಗಿದ್ದಾರೆ. [20]ದೇವಾಲಯದ ನೆಲದಿಂದ ಕಲ್ಲನ್ನು ಹೇಗೆ ತೆಗೆದುಕೊಂಡರು? ಇಲ್ಲಿ ಕೆಲ ವಿಚಾರಗಳಿವೆ: (1) ಸಾಮಾನ್ಯವಾಗಿ ದೇವಾಲಯದ ಆವರಣವು ಜನರಿಂದ ಮತ್ತು ಪ್ರಾಣಿಗಳಿಂದ ತುಂಬಿರುತ್ತಿತ್ತು. ಇತ್ತೀಚೆಗೆ, ಯೇಸು ದೇವಾಲಯದ ಮಣ್ಣಿನ ನೆಲದ ಮೇಲೆ ಬರೆದಿದ್ದನು (ಯೋಹಾನ 8:6, 8).

ದೇವಾ ಲಯದ ಆವರಣವು ಚಲ್ಲಾಪಿಲ್ಲಿಯಾದ ಅವಶೇಶಗಳಿಂದ ತುಂಬಿತ್ತು. (2) ಕ್ರಿಸ್ತಪುರ 20ರಲ್ಲಿ ಹೆರೋದನು ಕಟ್ಟಡದ ಜೀರ್ಣೋದ್ಧಾರ ನಡೆಸಿದ್ದನು ಮತ್ತು ಕಾರ್ಯವು ಪ್ರದತಿಯಲ್ಲಿತ್ತು. ನಿರ್ಮಾಣಹಂತದ ಯಾವುದೇ ಪ್ರದೇಶವು ಅನವಷ್ಯಕ ವಸ್ತುಗಳಿಂದ ಮತ್ತು ಅವಶೇಶಗಳಿಂದ ಸುತ್ತುವ ರೆಲ್ಪಟ್ಟಿರುತ್ತದೆ. (3) ಆ ಮುಖಂಡರುಗಳು ತಮ್ಮ ಕೈಗಳಲ್ಲಿ ಮತ್ತು ಬಟ್ಟೆಗಳಲ್ಲಿ ಕಲ್ಲುನು ತೆಗೆದುಕೊಂಡು ಸಿದ್ಧರಾಗಿಯೇ ಬಂದಿರಬಹುದು

[21]ಯು ಹೆಚ್ಚಿನ ಪದಗಳನ್ನು ಸೇಲಿಸುವುದಾಗಿದ್ದು, ಮೂಲ ವಚನಗಳ ಅರ್ಥನ್ನು ಬದಲಾಯಿಸದೆ ಉತ್ತಮ ಹಸ್ತಪ್ರತಿಗಳಲ್ಲಿ ಇವು ಸಿಕ್ಕುವುದಿಲ್ಲ. [22]ಕಾಣಿಕೆಯ ಪೆಟ್ಟಿಗೆಯು ಸ್ತ್ರೀಯರ ಮಂಟಪದ ಭಾಗವಾಗಿತ್ತು. (ದೇವಾಲಯದ ಆ ಪ್ರದೇಶದ ಬಗೆಗೆ ಪುಟ 46ರಲ್ಲಿನ ಟಿಪ್ಪಣಿಯನ್ನು ಪುನರಾವಲೋಕಿಸಿಲಿ.) [23]ಯೋಹಾನ 8:59ರ ಘಟನೆಯ ಕೆಲಸಮಯದ ನಂತರ ಸ್ವಸ್ಥತೆಯು ನಡೆಯಿತು ಎಂಬುದು ಇದೂ ಸಹ ಸಾಧ್ಯವಾದದ್ದಾಗಿದೆ. ಈ ಪ್ರಸಂಗದಲ್ಲಿ ನಾವು ವಿಚಾರಮಾಡುವ ವಿವಿಧ ಸಾಧ್ಯತೆಗಳನ್ನು ಈ ಪಾಠದಲ್ಲಿ ಬರಲಿವೆ. [24]ಹಿಂದಿನ ವಾದವಿವಾದಗಳು ಮತ್ತಾಯ 12:1-14 ಮತ್ತು ಯೋಹಾನ 5:1-47ರಲ್ಲಿ ಸಿಕ್ಕುವವು ಆಗಿವೆ. [25]ಈ ಕಥೆಯ ವಿವರವಾದ ಅಧ್ಯಯನಗಳು ಈ ಪುಸ್ತಕದಲ್ಲಿ ನಂತರದಲ್ಲಿ ಸಿಕ್ಕುವ "ನಾನು ಕುರುಡನಾಗಿದ್ದೆನೆ, ಆದರೆ ಈಗ ನೋಡುತ್ತಿದ್ದೇನೆ" ಎಂಬುದನ್ನು ನೋಡಿಲಿ. [26]ಸಾಮ್ಯಗಳ ಚರ್ಚೆಗಾಗಿ *ಕ್ರಿಸ್ತನ ಜೀವಿನ ಚರಿತ್ರೆ, 3ನೇ* ಪುಸ್ತಕದಲ್ಲಿ ಸಿಕ್ಕುವ "ಸಾಮ್ಯರೂಪವಾಗಿ ಆತನು ಅನೇಕ ಸಂಗತಿಗಳನ್ನು ಮಾತನಾಡಿದನು" ಎಂಬುದನ್ನು ನೋಡಿಲಿ. ತಾತ್ವಿಕವಾಗಿ ನೋಡಿದರೆ ಯೋಹಾನ 10:1-5 ಇದೊಂದು ರೂಪಕವಾಗಿದೆ. ಸಾಮ್ಯವು "ಹರಡಲ್ಪಟ್ಟ ಮುಗುಳ್ನಗೆ" (ಈ ಪದವು ಸಾಮಾನ್ಯವಾಗಿ ಹೋಲಿಕಾತ್ಮಕವಾದ "ಅದರ ಹಾಗೆ" ಅಥವ "ಅದರೆಂತೆ" ಎಂಬವನ್ನು ಬಳಸಲ್ಪಡುವ) ಎಂಬಂತಿದ್ದು ರೂಪಕವು ವಿಸ್ತಲಿಸಲ್ಪಟ್ಟ ರೂಪಕಲಂಕಾರವಾಗಿದೆ (ಹೋಲಿಕೆಗಾಗಿ ಯಾವುದೇ ಪದವನ್ನು ಬಳಸದ ಹೋಲಿಕೆಯಾಗಿದೆ). ಸಾಮ್ಯವು ಸಾಮನ್ಯವಾಗಿ ಒಂದು ಸತ್ಯವನ್ನು ಮಾತ್ರ ಬೋಧಿಸುವುದಾಗಿದ್ದು, ರೂಪಕವು ಸಾಮಾನ್ಯವಾಗಿ ಅನೇಕವನ್ನು ಬೋಧಿ ಸುವುದಾಗಿದೆ. [27]ಈ ಪದವು ಯೋಹಾನ 16:25, 29 ಮತ್ತು 2 ಪೇತ್ರ 2:22ರಲ್ಲೂ ಕಂಡು ಬರುವುದಾಗಿದೆ. [28]ನಿನ್ನ ಕೇಳುಗರು ಕುಲಿಗಳ ಸಾಕುವಿಕೆಯ ಬಗೆಗೆ ಚಿರಪಲಿಚಿತರು ಇಲ್ಲದೆ ಇರಬಹುದು. ಹಾಗಾಗಿದ್ದಲ್ಲ, ನೀವಿರುವೆಡೆಯಲ್ಲಿ ಕುಲಿಗಳನ್ನು ನೋಡಿಕೊಳ್ಳುವ ಲೀತಿಯನ್ನು ಮತ್ತು ಯೇಸುವಿನ ಸಮಯದಲ್ಲಿ ಅವರು ನೋಡಿಕೊಳ್ಳುವ ಲೀತಿಯಲ್ಲೂ ಯಾವ ಭಿನ್ನತೆಗಳು ಇವೆ ಎಂದು ಗಮನಿಸಿಲಿ. [29]ಇದು ಈ ಲೀತಿಯಲ್ಲಿ ಯಾವಾಗಲೂ ಇರುವುದಿಲ್ಲ. ಉದಾಹರಣೆಗಾಗಿ, ವಸಂತಕಾಲದಲ್ಲಿ, ಹುಲ್ಲು ಹಸಿರಾಗಿಯೂ, ಹುಲುಸಾಗಿಯೂ ಬೆಳೆದಿರುವಾಗ, ಕುಲಿಹಿಂಡು ರಾತ್ರಿಯಲ್ಲಿ ಉಣ್ಣೆಕತ್ತಲಿಸಲು ಮತ್ತು ಮಾಂಸದ ಉತ್ಪಾದನಗಾಗಿ ಹೊಲದಲ್ಲಿ ಇಡಲ್ಪಡುತ್ತವೆ (ಲೂಕ 2:8). ಇತರ ಸಮಯದಲ್ಲಿ, ರಾತ್ರಿ ಹಟ್ಟಿಯಲ್ಲಿ ಇಡಲ್ಪಡುತ್ತವೆ. [30]KJVಯು ಈ ಮನುಷ್ಯನನ್ನು "ಬಾಗಿಲು ಕಾಯುವವ" ಎಂದು ಕರೆದಿದೆ (ಯೋಹಾನ 10:3).

[31]ತಿರುಗಿ, ಕೇಲ ಮುಖ್ಯಸಂಗತಿಗಳಿಗೆ ಮಾತ್ರ ಸ್ಥಳವು ಇದೆ. ನೀವು ಈಭಾಗವನ್ನು ವಿಸ್ತಲಿಸಬಹುದು. [32]ಎಲ್ಲ ವಿಷೇಶಣಗಳಲ್ಲಿರುವಂತೆ ಇರುವ ಪದವು "ಒಳಗೆ" ಮತ್ತು "ಹೊರಗೆ" ಎಂದಿದ್ದು ಇದು ಅತಿರೇಕವಾದವುಗಳನ್ನು ಒತ್ತಿಹೇಳಲಾರದು: ನಾವು ಯೇಸುವಿನ ಪ್ರೀತಿಯ ಮತ್ತು ಕಾಳಜಿಯ "ಒಳಹೊರಗೆ" ಹೋಗಲಾರೆವು. [33]ಯೋಹಾನ 10:10ರ ಕೊನೆಯ ಭಾಗವು ಯೇಸು ಯಾಕೆ ಜಗತ್ತಿಗೆ ಬಂದನು ಎಂಬುದಕ್ಕೆ ಒಂದು ದೊಡ್ಡ ಹೇಳಿಕೆಯು ಆಗಿದೆ:ನಮಗೆ ಸಮೃದ್ಧವಾದ ಜೀ ವಿತವನ್ನು ಕೊಡಲು ಆತನು ಬಂದನು ಈ ಜೀವಿತದಲ್ಲಿ ಹಣ ಅಥವಾ ಇತರ ಸಂಗತಿಗಳಿಂದ ಸಮೃದ್ಧ ಯಾದ ಜೀವಿತವನ್ನು ಹೊಂದಲಾರೆವು ಎಂಬಾರ್ಥವನ್ನು ಇದು ಕೊಡುವುದಿಲ್ಲ. ಯೋಗ್ಯವಾದ ಜೀ ವಿತದಲ್ಲಿ ಇರುವಿಕೆಯು ಯೇಸುವಿನಲ್ಲಿಯೇ ಎಂದು ಇದು ಅರ್ಥವನ್ನು ಕೊದುತ್ತದೆ. [34]John Franklin Carter, *A Layman's Harmony of the Gospels* (Nashville: Broadman Press, 1961), 210. [35]ನಮಗಾಗಿ ದೇವರ ಚಿತ್ತವು (ನ್ಯಾಯಯತವಾದ, ದೇವಲಿಂದ ಒಪ್ಪಲ್ಪಟ್ಟ) ಬಾಗಿಲನ್ನು ಪ್ರವೇಶಿ ಸುವದು ಆಗಿದೆ. [36]ಅನೇಕ ಕುರುಬರು ಕುಲಿಗಳನ್ನು ಕಾಯಲು ಬೇರೊಬ್ಬರ ಕುಲಿಗಳನ್ನು ಬಾಡಿಗೆಗೆ ತೆಗೆದುಕೊಂಡಿರುತ್ತಾರೆ. ಹೀಗಿದ್ದಾಗಲೂ ಅನೇಕರು ಕುಲಿಗಳ ಬಗ್ಗೆ ಒಳ್ಳೆಯ ಹೃದಯವನ್ನು ಹೊಂದಿರುತ್ತಾರೆ. ಕೆಲವರು, ಹೇಗೋ, "ಹಣಕ್ಕಾಗಿ ಇದ್ದವರಾಗಿದ್ದು" ಮತ್ತು ಅಪಾಯವು ಬಂದಾಗ ಓಡಿಹೋಗುತ್ತಾರೆ. ಯೆಹೂದಿ ಮಟ್ಟ ಹಾಗೆಯೇ ಅಗಿತ್ತು ಎಂದೂ ಯೇಸು ಹೇಳಿದನು. ಬಳಸಿದ "ಬಾಡಿಗೆಯ" ಎಂಬಪದವು ಕೇವಲ ಬಾಡಿಗೆಗಾಗಿ ನೇಮಿಸಿಕೊಳ್ಳುವುದಲ್ಲ, ಆದರೆ ಸಂಬಳದಲ್ಲಿ ಆಸಕ್ತಿಯುಳ್ಳವನು ಎಂಬುದನ್ನು ಸೂಚಿಸುವುದಾಗಿದೆ. ಈ ಒಂದು ನಾವು ಅನ್ವಯವನ್ನೂ ಮಾಡಬಹುದಾಗಿದೆ: ವೇದಭಾಗದ ಹಿಲಿಯರು ಮತ್ತು ಬೋಧಕರು "ಹಣಕ್ಕೋಸರವಾಗಿ" ಎಂದಿಗೂ ಕೆಲಸಮಾಡಲಾರರು. [37]ಸಭೆಯ ಹಿಲಿಯರು "ಕುರುಬನ ಕೆಳಗಿರುವವರು ಆಗಿದ್ದಾರೆ" (1 ಪೇತ್ರ 5:1-4)

ಅವರು ಹಿಂಡನ್ನು ನೋಡಿಕೊಳ್ಳುವವರೂ ಆಗಿದ್ದಾರೆ (ಅಪೊಸ್ತಲರ ಕೃತ್ಯಗಳು 20:28-31) - ಅದು ಒಂದು ನಿರ್ಧಿಷ್ಟವಾದ ಸಭೆಯು ಅವರ ಕೊಡಲ್ಪಡುವದೂ ಆಗಿತ್ತು. ಅವರು ಮುಖ್ಯ ಕುರುಬನಿಗೆ ಮತ್ತು ಆತನ ಮಾತಿಗೆ ಒಳಪಡುವವರಾಗಿದ್ದಾರೆ. [38]ಇದು ಯೋಗ್ಯವಾಗಿದ್ದಾದರೆ ಅನ್ಯಪಾಪಿಯು ಪಶ್ಚಾತ್ತಾಪಪಟ್ಟು ಮತ್ತು ದೀಕ್ಷಾಸ್ನಾನ ಹೊಂದಿ ದೇವರ ಚಿತ್ತವನ್ನು ಮಾಡಲು ನೀನು ನಿರ್ದಿಷ್ಟವಾದ (ಮಾರ್ಕ 16:15, 16: ಅಪೊಸ್ತಲರ ಕೃತ್ಯಗಳು 2:38), ಮತ್ತು ಕ್ರೈಸ್ತನು ಹೇಗೆ ಪುನಶ್ಚೇತನಗೊಳ್ಳಬಹುದು ಎಂಬ ಸೂಚನೆಗಳನ್ನು ಕೊಡಬಹುದು (ಅಪೊಸ್ತಲರ ಕೃತ್ಯಗಳು 8:22; ಯಾಕೋಬ 5:16; 1 ಯೋಹಾನ 1:9). [39]Paul Brownlow, *A Shepherd's Heart*, quoted in *The Central Concern,* weekly bulletin of the Central church of Christ, Cleburne, Tex. (20 April 2000): 2.